# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್-2021




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 38**
**ಸಂಚಿಕೆ - 6**
**ಮಾರ್ಚ್ - 2021**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ನನ್ನ ಫಾ..ಫಾ..ಫಾ..ಪ್ರಕರಣವು! | ಜಯಶ್ರೀ ದೇಶಪಾಂಡೆ | 5 |
| ಸ್ಪರ್ಧೆ | ಸಿ.ಆರ್.ಸತ್ಯ | 7 |
| ಗೋಬಿಮಂಚೂರಿ ಪದ್ಯ | ಚಿಂತಾಮಣಿ ಕೊಡ್ಲೆಕೆರೆ | 9 |
| ಏನೋ ಹೋಗಲಿಂತ.. | ಕೆ.ಎಸ್. ಶ್ರೀಶೈಲನ್ | 10 |
| ಶುದ್ಧ ಕನ್ನಡ........ | ನಾಗರಾಜ ನಾಯಕ್ | 14 |
| ದೇವರಪೂಜೆ ಮತ್ತು ನನ್ನ ಕಸದಡಬ್ಬ | ರಘುನಂದನ | 18 |
| ತಮಿಳು ಕಾಮಾಚ್ಚಿಯ .... | ಶ್ರವಣಕುಮಾರಿ | 21 |
| ಕನ್ನಡ್ ಪದಗೋಳ್ ಎಂದರೆ .... | ಕೆ.ಎಸ್.ಸೋಮೇಶ್ವರ | 24 |
| ತುಂತುರು | ದಂನಳ | 18 |
| ಹುಷಾರು, ಹುಷಾರು | ನಂನಾಗ್ರಾಜ್ | 29 |
| ಎರಡು ಕಿರುಗತೆಗಳು | ಸೂರಿ ಹಾರ್ದಳ್ಳಿ | 31 |
| ಪುಸ್ತಕ ಪರಿಚಯ | ಸುಕೇಶವ | 34 |
| ಆಸ್ಪತ್ರೆಯಲ್ಲಿ | ಓಂ ಪ್ರಕಾಶ್ | 35 |
| "ಬ್ಯೂಜಿನಾ.....?" | ಗುಂಡುರಾವ್ ದೇಸಾಯಿ | 36 |

ಮುಖಪುಟ ವ್ಯಂಗ್ಯಚಿತ್ರ :
**ಇಂಟರ್‌ನೆಟ್ ಕೃಪೆ**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

ಅಮೆರಿಕಾದ ಶ್ವೇತ ಭವನದಲ್ಲಿ ಇತರ ವರ್ಣದವರಿಗೂ
ಸ್ಥಾನಗಳನ್ನು ಕಲ್ಪಿಸಿದ್ದನ್ನು

**ಅಪರಂಜಿ ಬಹುವಾಗಿ ಶ್ಲಾಘಿಸಿದಳಂತೆ !!**

***

ನಾಲ್ಕು ವರ್ಷಗಳಿಗಿಂತ ಒಂದೇ ಜಾಗದಲ್ಲಿ ಇರಬಾರದು

– ಬಿಡಿಎ ಸುದ್ದಿ

**ಅರಣ್ಯ – ರೋದನ ಎಂದರೆ ಇದೇ ಇರಬೇಕು !!**

***

ಮಮತಾಗೆ ವಿದಾಯ ಹೇಳಲು ಬಂಗಾಲ ನಿರ್ಧಾರ

– ಪತ್ರಿಕೆ

**ಕೂಸು ಹುಟ್ಟುಕ್ಕೆ ಮುಂಚೆ ....... !!**

***

ಪದ್ಮಭೂಷಣ ಪ್ರಶಸ್ತಿಯ ಮಟ್ಟವನ್ನೇರಿಸಿದ ಕಂಬಾರ ಅವರಿಗೆ
ಅಪರಂಜಿಯ ಹೃತ್ಪೂರ್ವಕ ಶುಭಾಶಯಗಳು !!!

***

ಮಂಗಳ ಗ್ರಹದ ಛಾಯಾಚಿತ್ರಗಳನ್ನು ಚೀನಾ ಬಿಡುಗಡೆ
ಮಾಡಿದೆ – ಸುದ್ದಿ

**ಕೋವಿಡ್ ತಡೆಯಲಿಲ್ಲ –––––– ಜುಟ್ಟಿಗೆ ..!!!**

***

ಕರ್ನಾಟಕದ ಕ್ರೀಡಾಪಟುಗಳು ಒಳ್ಳೆಯವರು

– ಶ್ರೀ ಸುನಿಲ್ ಗಾವಸ್ಕರ್

**ಇದು ಅರಿವಾಗಲು ಅವರಿಗೆ ಇಷ್ಟು ಕಾಲ ಬೇಕಾಗಿದ್ದು ಸೋಜಿಗ!?**

***

ಯುವ ಕಾಂಗ್ರೆಸ್ ಚುನಾವಣೆಯಲ್ಲಿ ಗೊಂದಲವಿಲ್ಲ –ಡಿಕೆಶಿ

**ಬೆಂಕಿ ಇಲ್ಲದೆ ಹೊಗೆಯಾಡುತ್ತದೆಯೇ ಸ್ವಾಮಿ ?!**

***

ತಮ್ಮ ಫೋಟೋ ಶೂಟ್ ಮಾಡಲು ಕ್ಯಾಮೆರಾ ಕದ್ದರು ;
ಬಂಧನ – ಪತ್ರಿಕೆ

**ಪೋಲಿಸಿನವರು ಆತನ ಆಶೆಯನ್ನು ಪೂರೈಸಿದರಲ್ಲ !!!**

# ನಮ್ಮ ನಿಮ್ಮಲ್ಲಿ

♦ಶಿವಕುಮಾರ್

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಬದುಕು ಬರಹಗಳ ಬಗ್ಗೆ ನನ್ನ ಸಾಹಿತಿ ಮಿತ್ರ ವಿಜಯಶಂಕರ್ ಅವರು ಒಂದು ಬಹು ಸ್ವಾರಸ್ಯವಾದ ಮೌಲ್ಯಯುತವಾದ ಪುಸ್ತಕವನ್ನು ಬರೆದಿದ್ದಾರೆ. ಮಾಸ್ತಿಯವರ ಹಲವು ಕಾದಂಬರಿಗಳು ಮತ್ತು ಬಹುತೇಕ ಕಥೆಗಳನ್ನು ಓದಿಕೊಂಡಿರುವ ನನಗೆ ಅವರ ಸಾಹಿತ್ಯದ ಹರಹು, ವಿಸ್ತಾರ ಬೆರಗುಗೊಳಿಸುವಂತಹದು ಎಂಬ ಅಂಶ ತಿಳಿದದ್ದು ಈ ಪುಸ್ತಕವನ್ನು ಓದಿದ ನಂತರವೇ ಎಂಬ ಮಾತು ನಿಜ.  ಸಣ್ಣಕಥೆ, ಕಾದಂಬರಿಗಳೇ ಅಲ್ಲದೆ, ನಾಟಕಗಳು, ಕಥನ ಕಾವ್ಯ, ವಿಮರ್ಶೆ ಸಂಕೀರ್ಣ ಇವೇ ಮೊದಲಾಗಿ ಹತ್ತು ಹಲವಾರು ಕ್ಷೇತ್ರಗಳಲ್ಲಿ ಮಾಸ್ತಿಯವರ ಪ್ರತಿಭೆ ಮಿಂಚಿರುವುದನ್ನು ಈ ಪುಸ್ತಕದಿಂದ ತಿಳಿಯಬಹುದು.

ಮಾಸ್ತಿಯವರ ಜೀವಿತದ ಹಲವು ಮೈಲಿಗಲ್ಲುಗಳ ಜೊತೆಗೆ ಅವರ ಸಾಹಿತ್ಯದ ಹಲವು ಹೊಳಹುಗಳನ್ನು ಒಪ್ಪಮಾಡಿರುವ 'ಬದುಕು ಬರಹ' ಎಂಬ ಅಧ್ಯಾಯದಿಂದ ಈ ಪುಸ್ತಕ ಪ್ರಾರಂಭವಾಗುತ್ತದೆ. ಈ ಭಾಗದಲ್ಲಿ ಲೇಖಕರು ಮಾಸ್ತಿಯವರ ಅಧ್ಯಾತ್ಮ ಚಿಂತನೆಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ಕಲೆಹಾಕಿದ್ದಾರೆ.

'ಜೀವ ಜಗತ್ತು, ಜಗದೊಡೆಯ ಎಂಬ ಈಶ್ವರ ತತ್ವ –ಈ ಮೂರರ ಪರಸ್ಪರ ಸಂಬಂಧ, ಬಾಂಧವ್ಯ ಸ್ವರೂಪದ ಬಗೆಗಿನ ಮಾಸ್ತಿಯವರ ವಿಚಾರ ಅವರ ಕವನವೊಂದರಲ್ಲಿ ಬಿಂಬಿತವಾಗಿರುವಂತೆ, ಈಶಾವಾಸ್ಯಮಿದಂ ಸರ್ವಂ ಎಂಬ ಉಪನಿಷತ್ ವಿಚಾರವನ್ನು ಮಾಸ್ತಿ ತಿಳಿಸುವ ಬಗೆ ಹೀಗಿದೆ.

**ಇಲ್ಲಿ ಹೂವಿನ ಇಲ್ಲಿ ಜೀವನ**
**ರೂಪನಾನುತ ನಲಿಯುತ**
**ಬಲ್ಲತನ ಬೆಕ್ಕಸದಿ ಭಾಪುರೆ**
**ಭಾಪು ಎಂಬವೋಲಾಡುತ**
**ಹಬ್ಬ ಮಾಡುತ ಎತ್ತಲು**
**ಒಬ್ಬನಿರುವನು ನಿತ್ಯನು.**

ಮಾಸ್ತಿಯವರ ಭಾಷಾಸೂಕ್ಷ್ಮತೆಯ ಮೇಲೆ ಲೇಖಕರು ಬೆಳಕು ಚೆಲ್ಲುವ ಪರಿಯನ್ನು ಇಲ್ಲಿ ನೋಡಿ.


‘ ಮಾಸ್ತಿಯವರ ಭಾಷಾ ಬಳಕೆಯ ಸೂಕ್ಷ್ಮತೆ , ಜನಸಾಮಾನ್ಯರ ಬಳಕೆಯ ಪದಗಳನ್ನು ಎತ್ತಿಕೊಂಡು ಅದನ್ನು ಹೊಸಹೊಳಪಿನಿಂದ ಬಳಸಬಲ್ಲ ಅವರ ಶಕ್ತಿ ‘ಒಬ್ಬರಿಗೊಬ್ಬರು ಸರಿದುಕೊಂಡು ನಡೆಸುವ ಸಂಸಾರ ‘ ಎಂಬ ವಿವರಣೆಯಲ್ಲಿ ಕಾಣುತ್ತದೆ. ಅದು ಕೇವಲ ‘ಹೊಂದಾಣಿಕೆ‘ ಮಾಡುವುದು ಮಾತ್ರವಲ್ಲ. ’ಸರಿದುಕೊಂಡು’ ಎಂಬ ಪದ ಚಲನೆಯ ಭಾವವನ್ನೂ ಸೂಚಿಸುತ್ತದೆ. ಹುಟ್ಟು ಸಾವುಗಳು ಬದುಕಿನ ಎರಡು ದಡಗಳು. ಅದರ ನಡುವಿನ ಚಲನೆ ಬದುಕು. ಆ ಚಲನೆಯಲ್ಲಿ ಒಬ್ಬರಿಗೊಬ್ಬರು ಸರಿದುಕೊಂಡು ನಡೆಸುವ ಸಂಸಾರ ಎಂಬುದು ಸಂಸಾರಕ್ಕೊಂದು ತಾತ್ವಿಕ ಭಿತ್ತಿಯನ್ನೂ ಸೂಚಿಸುತ್ತದೆ. ‘

ಮಾಸ್ತಿಯವರ ಸಮಗ್ರ ಬರಹಗಳ ಪರಿಚಯವನ್ನು ಲೇಖಕರು ಬಹು ಅಸ್ಥೆಯಿಂದ ಓದುಗರಿಗೆ ಈ ಪುಸ್ತಕದಲ್ಲಿ ಉಣಬಡಿಸಿದ್ದಾರೆ. ಅವೆಲ್ಲವನ್ನು ವಿವರಿಸಿ ಹೇಳುವುದು ಈ ಲೇಖನದ ಉದ್ದೇಶವಲ್ಲ. ಒಮ್ಮೆ ಈ ಪುಸ್ತಕವನ್ನು ಓದಿದ ನಂತರ ನಾವು ಇನ್ನೂ ಓದಿಲ್ಲದ ಮಾಸ್ತಿ ಪುಸ್ತಕಗಳನ್ನು ಕಾತರದಿಂದ ಹುಡುಕಿ ಓದುವಂತೆ ಈ ಪುಸ್ತಕ ನಮ್ಮನ್ನು ಪ್ರಚೋದಿಸುತ್ತದೆ ಎಂದು ಮಾತ್ರ ಹೇಳಬಲ್ಲೆ. ಸಾಹಿತ್ಯ ಪ್ರಿಯರ ಕಪಾಟಿನಲ್ಲಿ ಖಂಡಿತವಾಗಿ ಅಗ್ರಸ್ಥಾನವನ್ನು ಗಳಿಸಬೇಕಾದ ಈ ಪುಸ್ತಕದಲ್ಲಿ ಮಾಸ್ತಿ ಸಾಹಿತ್ಯವನ್ನು ಕುರಿತು ವಿಜಯಶಂಕರರು ಹೇಳಿರುವ ನಾಲ್ಕು ಮಾತುಗಳನ್ನು ಉದ್ಧರಿಸಿ ನನ್ನ ಮಾತುಗಳನ್ನು ಮುಗಿಸುವೆ.

‘ ................ಮಾಸ್ತಿಯವರ ಸಾಹಿತ್ಯದ ಮರು ಓದು ನಿರ್ಮಲ ಜೀವನ, ನಿರುದ್ವಿಗ್ನ ನಂಬುಗೆ– ನಿಧಾನ ಶ್ರುತಿಯಲ್ಲಿ ಅರಳುವ ಜೀವನದ ಸಜ್ಜನ ಮೌಲ್ಯಗಳನ್ನು ಎತ್ತಿ ತೋರಿಸುತ್ತದೆ. ಲಾಭ, ಸ್ವಾರ್ಥ, ಪ್ರಯೋಜನವಾದಿ ಚಿಂತನೆಗಳ ವಾತಾವರಣದಲ್ಲಿ ಪ್ರಾಮಾಣಿಕ, ನಿರ್ಮಲ ಬದುಕಿನ ಜೀವಪರ ಮೌಲ್ಯಗಳನ್ನು ಪುನಃ ನೆನಪಿಸುತ್ತದೆ. ನಮ್ಮ ಕಾಲಕ್ಕೂ ಸಲ್ಲುವ , ಇಂದಿಗೂ ಬೇಕಾದ ಸಾಹಿತ್ಯವಾಗಿ ಅದರ ಸಮಕಾಲೀನ ಮಹತ್ವವನ್ನು ಅವರ ಬರಹಗಳ ಮರು ಓದು ತೋರಿಸಿಕೊಡುತ್ತದೆ.‘

**ಮಾಸ್ತಿ ವೆಂಕಟೇಶ ಅಯ್ಯಂಗಾರ್**
**ಬದುಕು ಬರಹ**
ಲೇಖಕರು: ಎಸ್ ಆರ್ ವಿಜಯಶಂಕರ,
ಪ್ರಕಟಣೆ: ಸಾಹಿತ್ಯ ಅಕಾಡೆಮಿ.

ISBN: 078–93–90310–99–9




■

# ನನ್ನ ಫಾ..ಫಾ..ಫಾ..ಪ್ರಕರಣವು!

। ಜಯಶ್ರೀ ದೇಶಪಾಂಡೆ

"ಫಾಯ್ ಬ್ರೋಮಯಾಲ್ಜಿಯಾ ಇದು" ಅಂದರು ನನ್ನ ಮೂಳೆ ತಜ್ಞ ಡಾಕ್ಟರು.

"ಏನು? ಫಾ..ಫಾ..ಫಾ..??" ನಾ ಬೆಚ್ಚಿ ಬಿದ್ದಿದ್ದೆ.

"ಮೂರು ಫಾ ಅಲ್ಲ, ಒಂದೇ..ಫಾ'– ಅವರು.

(ಅಲ್ಲ ಅಷ್ಟುದ್ದ ಹೆಸರಿನ ತಿಂಡಿಗಳೇನೋ ಗೊತ್ತು, ನಮ್ಮ ಮೂಳೆಗೂ ಇದೇ ಹೆಸರಿನ ಕಷ್ಟವ?)

ಕನ್ನಡಕದೊಳಗಿನ ಅವರ ಶಾಂತ ಕಣ್ಣುಗಳು ನನ್ನನ್ನೇ ನಿಟ್ಟಿಸಿದುವು, ಆ ಕಣ್ಣುಗಳಲ್ಲಿ ಅಪಾರ ಕರುಣೆ ಇದ್ದಂತೆ ನನಗದೇಕೋ ಭಾಸವಾಯ್ತು.

ಒಂದೋ ಮೂರೋ–(ಮನೆ ಹಾಳಾಗ್ಲಿ!!) –

"ನನಗೇನಾಗಿದೆ ಅದನ್ನು ಹೇಳಿ ಡಾಕ್ಟ್ರೇ" ದುಂಬಾಲುಬಿದ್ದೆ, ಜೊತೆಗೆ "ಅದೇನೋ ಫಾಯ್ ಬ್ರಾ..ಏ ಅಲ್ಲ..ಇರ್ಲಿ, ಅದರ ಹೆಸರು ಆ ಮೇಲೆ ಕಲೀತೀನಿ, ಈಗ ನನ್ನ ಶರೀರದ ನೋವಿಗೆ ಇದೊಂದೇ ಹೆಸರಾ ಅಥವಾ ಇನ್ನೊಂದೇನಾದ್ರೂ ಉಂಟಾ?" ಕೊಂಚ ಈಸಿ ಆಗಿರುವುದೇನಾದರೂ ಇರಬಹುದೇನೋ? ಆಶಾವಾದ ಮನುಷ್ಯನ ಮೂಲಭೂತ ಗುಣ?

"ಆ..ಅಂ...ಇರಬಹುದು. ನಿಮಗೆ ಸುಸ್ತು ಬೇರೆ ಜಾಸ್ತಿ, ಹಾಗೆ ನಿಮಗೆ ಕತ್ತು, ಕಾಲು, ಬೆನ್ನು, ಭುಜ, ಆಂಕಲು ಎಲ್ಲಾ ನೋವಂತೀರಿ ತಾನೆ? ರೂಮಟಾಲಜಿಸ್ಟರನ್ನು ಕೇಳಿದರೆ ಇದಕ್ಕೆ 'ಕ್ರಾನಿಕ್ ಫಟೀಗ್ ಸಿಂಡ್ರೋಮ್ " ಅನ್ನುವ ಸಾಧ್ಯತೆ.. (ಯಾವುದು ಬೇಕೋ ಆರಿಸಿಕೋ?!!?)

ಈಗೇನು? ಸರ್ವಾಂಗವೂ ಫಟಫಟಾ ಅಂತ ಸಿಡೀತಾ ಇರುತ್ತೆ ಗೋವಿಂದ ಅಂದುಬಿಡೋಣ...

ನಡುವೆಯೇ ನಾ ಬಾಯಿ ಹಾಕಿ 'ಇದರಲ್ಲಿ ಮೂರು ಪದ, ನೀವು ಹೇಳಿದ್ದರಲ್ಲಿ ಒಂದೇ, ಸೋ ಅದೇ ಇರಲಿ ಬಿಡಿ" ಅಂದೆ! ಮತ್ತದೇ ಕನಿಕರ ಸೂಸಿ, "ಅವರು ಹೇಳೋದೂ ಒಮ್ಮೊಮ್ಮೆ ಸರಿ ಇರೋ ಚಾನ್ಸ್ ಇರುತ್ತೆ. (ಗೊಣಗಿದರಾ??) ಸೋ ಈಗ ಟ್ರೀಟ್ ಮೆಂಟು ಎರಡಕ್ಕೂ ಕೊಡೋದಾ?" ಅಂದರು.

"ಹೂಂ ಮತ್ತೆ, ಒಂದಕ್ಕಿಂತ ಒಂದು ಜಬರ್ದಸ್ತ್ ಹೆಸರು ಹೇಳಿದಿರಿ, ಎರಡೂ ಭೂತ ಓಡಿಸೋರು ನೀವೇ ತಾನೇ? " ಅಂದೆ ನಕ್ಕು. ಅವರೂ ನಕ್ಕರು.

ಈ ವೈದ್ಯರಲ್ಲಿ ನನಗಿಷ್ಟೊಂದು ಸಲಿಗೆ ಯಾಕೆ ಎಂದು ಹೇಳಿಬಿಡ್ತೀನಿ. ಹದಿನೈದಿಪ್ಪತ್ತು ವರ್ಷದಿಂದ ನನ್ನ ಮುರಿದ ಮೂಳೆಗಳ ನಿಗಾ ವಹಿಸಿ, ಆರೈಕೆ ಮಾಡಿಸಿ ನಾನು ಇಷ್ಟಾದರೂ ಎದ್ದು ಓಡಾಡುವ ಹಾಗೆ ಮಾಡಿದ ಧನ್ವಂತರಿ ಇವರೇ. ಕಾಲಕ್ರಮೇಣ ಅವರ ಕೂದಲು ಬೆಳ್ಳಗಾಗಿ ಅವರು ಹಿರಿಯ ವೈದ್ಯ, ನಾನು ಹಳೇ ಪೇಶಂಟಾಗಿ ಉಳಿದದ್ದು ನನ್ನ ಜೀವನದ ಸಾಧನೆಗಳಲ್ಲಿ ಒಂದು!

"ಎರಡು ಮೂರು ಸಲ ಬಿದ್ರಿ ಅಲ್ವಾ ನೀವು ನೆಲಕ್ಕೆ, ಮತ್ತಿನ್ನೇನು ಇದೆಲ್ಲ ಆಗೋದೇ. ಹಾಗೆಲ್ಲ ಬೀಳಬಾರದಿತ್ತು ನೀವು" ಮತ್ತಷ್ಟು ಕಾಳಜಿ ಆ ಕಣ್ಣುಗಳಲ್ಲಿ.

" ಏನು ಮಾಡ್ಲಿ ಡಾಕ್ಟ್ರೇ ಆ ನೆಲ ತನ್ನ ಮೇಲೆ ನೀರು ಚೆಲ್ಲಿದೆ ನೋಡ್ಕೊಂಡು ಹೋಗು ಎಂದು ನನಗೆ ಹೇಳಲೇ ಇಲ್ಲ."

" ಅದನ್ನು ನಿಮ್ಮ ಕಣ್ಣು ಹೇಳಬೇಕಿತ್ತು" ನಕ್ಕರು.

"ಅದೂ ನಿಜವೇ ಅನ್ನಿ, ಮುಖದ ಎರಡು ಕಣ್ಣಿನ ಮಾತನ್ನು ಮುಂದೆ ಸಿಗಾಕ್ಕೊಂಡಿರೋ ಇನ್ನೆರಡು ಕಣ್ಣು ಕೇಳಲೇ ಇಲ್ಲ, ನನ್ನನ್ನೂ ಕೆಡವಿ ತಾನೂ ಒಡೆದು ಛೇ.. ಇನ್ನು ಮೇಲೆ ಕನ್ನಡಕವನ್ನೇ ಹಾಕಬಾರದು ಅನ್ನುವಷ್ಟು ಕೋಪ ಬಂದಿದೆ."

" ಅದನ್ನು ಹಾಕದಿದ್ರೆ ನೀರು ಕಾಣುತ್ತಾ?"

ಹೌದಲ್ಲ, ಚತುಷ್ನೇತ್ರೆಯರ ಬವಣೆಗಳು ಇವೆಲ್ಲ, ಕನ್ನಡಕ ಹಾಕಿದರೂ ಕಷ್ಟ ಹಾಕದಿದ್ದರೆ ಇನ್ನೂ ಕಷ್ಟ. ಒಟ್ಟಾರೆ ನಾ ಬಿದ್ದಿದ್ದು ನನ್ನದೇ ತಪ್ಪು ಎಂಬಲ್ಲಿಗೆ ತರ್ಕಮೀಮಾಂಸೆ ಎಲ್ಲ ನಿಂತುಹೋಗಿ " ಹಾಗಾದರೆ ಬಿದ್ದು ಬಿದ್ದು ಆಗುವ ರೋಗಗಳಾ ಇವು " ಅಂದೆ.

" ಇವು ರೋಗಗಳೇ ಅಲ್ಲ ಕಣಮ್ಮಾ.." ನನ್ನ ಕನ್ವಿನ್ಸ್ ಮಾಡುವ ಜವಾಬ್ದಾರಿ ಅವರದು. "ಮೆಕ್ಯಾನಿಕಲ್ ಪ್ರಾಬ್ಲೆಂ ಅಂತೀವಿ ನಾವಿವಕ್ಕೆ. ಮೂಳೆ, ಮಜ್ಜೆ, ವರ್ಟೆಬ್ರಾ, ಕಾರ್ಟಿಲೇಜು.. ಇಗೋ ನೋಡ್ರಿ" ಅವರ ಮೇಜಿನ ಮೇಲೆ ಒಂದು ಮಿನಿಯೇಚರ್ ಅಸ್ಥಿಪಂಜರ ಸದಾ ನೇತಾಡ್ತಾ ಇರುತ್ತೆ,– ಅದೆಷ್ಟನೆಯ ಬಾರಿಗೋ ಅದನ್ನು ನನಗೆ ಕೈ ಮಾಡಿ ತೋರಿಸಿ– ವಿವರಿಸಿದರು "ನಿಮ್ಮ ಬೆನ್ನೆಲುಬು ಇದು,.."

(ನಂದಾ? ಇಷ್ಟು ಚಿಕ್ಕದಾ ...?? ಓಕೆ, ತಮಾಷೆಗಿದು ಸಮಯವಲ್ಲ)

ನಿಮ್ಮ ಬೆನ್ನ ಮೂಳೆಯ ಡಿಸ್ಕ್ ಗಳು ಸವೆದಿವೆ, ಈಗಾಗಲೇ ಎರಡು ತುಂಬಾ ಕಾಟ ಕೊಟ್ಟಿದ್ದರಿಂದ ಅವನ್ನು ಕುಯಿದು ತೆಗೆದಾಯಿತು. ಇನ್ನು ಅದರ ಅಣ್ಣ ತಮ್ಮಡಿಸ್ಕುಗಳೂ ಸವೆದು ಸೊರಗಿ ಸಣ್ಣಗಾಗಿವೆ. ಛೇ ಛೇ...ಅಷ್ಟೇ ಅಲ್ಲ ಎಂಟೋರ್ಷದ ಹಿಂದೆ ನೀವು ಜಯನಗರದಲ್ಲಿ ಬಿದ್ದು ಬಂದಿರಿ ತಾನೇ? ಆಗ ಮೊಳಕಾಲಿಗೂ ಹೀಗೇ ಆಯ್ತು..ಸೋ ಅದನ್ನೂ ಕುಯ್ದು..."

ಇದೆಲ್ಲ ಅವರ ಹೆಡ್ಡೇಕು ಅಂತ ನಿರ್ಧರಿಸಿರುವ ನಾನು ಇದೆಲ್ಲದರ ಬಗ್ಗೆ ತಲೆ ಕೆಡಸಿಕೊಳ್ಳುವವಳೇ ಅಲ್ಲ ಬಿಡಿ. ಅವರು ಹೇಳಿದ ಉಪಾಯಗಳಾದ ಫಿಜಿಯೋಥೆರಪಿ, ಯೋಗ, ವ್ಯಾಯಾಮ, ವಾಕಿಂಗುಗಳನ್ನೆಲ್ಲ ಅಷ್ಟೋ ಇಷ್ಟೋ ಮಾಡಿ ಕಾಲು ಎದ್ದು ನಿಂತಾಕ್ಷಣ ನಾನು ಮತ್ತೆ ಟ್ರಿಪ್ಪು ಟೂರು ಅಂತ ದೇಶವಿದೇಶಕ್ಕೆ ರವಾನೆ ಆಗುವ ಛಲ ಬಿಡದ ತ್ರಿವಿಕ್ರಮಿ! (ಸ್ತ್ರೀ ಲಿಂಗ ಬೇಕು ತಾನೇ?) ಅವರಿಗೂ ಗೊತ್ತು ಇವಳಿಗೆ ಕಾಲಲ್ಲಿ ಚಕ್ರ ಅಂತ!

ಫಕ್ಕನೆ ನೆನಪಾಯ್ತು.. "ಅದೇನೋ ಸಿಂಡ್ರೋಮ್ ಅಂದಿರಲ್ಲ ಡಾಕ್ಟರೇ ಹಾಗಂದರೆ ಅದೇನು? ಅದು ವಾಸಿ ಆಗುತ್ತಾ?"

ಮುಗುಳ್ನಕ್ಕರು. "ಒಂದು ಗುಟ್ಟು ಹೇಳ್ತೀನಿ ಯಾರಿಗೂ ಹೇಳಬೇಡಿ ಆಯ್ತಾ? ಸಿಂಡ್ರೋಮ್ ಅಂದರೆ ನಿಮಗೆ ಆಗ್ತಾ ಇರೋ ನೋವು, ಡಿಸ್ಕಂಫರಟು ಇತ್ಯಾದಿತ್ಯಾದಿಗಳಿಗೆ ಮೂಲ ಏನು? ಕಾರಣ ಯಾವುದು ಅಂತ ತಿಳಿದು ಬರದೇ ಇರೋವಂಥ ಬ್ರಹ್ಮ ಗುಟ್ಟದು.. ಒಟ್ನಲ್ಲಿ ಸಿಂಡ್ರೋಮ್ ಅಂದರೆ ನನಗ್ಗೊತ್ತಿಲ್ಲಪ್ಪಾ ಅಂದ ಹಾಗೆ.." ತಮ್ಮ ಮಾತಿಗೆ ಅವರಿಗೇ ಇನ್ನಷ್ಟು ನಗೆ ಉಕ್ಕಿ ಬಂದು ನಕ್ಕಾಗ ನಾನೂ ನಗಲೇಬೇಕಾಯ್ತು.

ಅವರ ಕನ್ಸಲ್ಟೇಶನ್ ರೂಮಿನಿಂದ ಹೊರಬಿದ್ದಾಗ ಅಲ್ಲಿ ನೋವನ್ನೇ ಮುಖದ ತುಂಬ ಹೊತ್ತು ಕೂತ ಮೂಳೆಸಂಕಷ್ಟ ಪೀಡಿತರು 'ಇವಳೇನಪ್ಪಾ ನಗುನಗುತ್ತ ಹೊರಗೆ ಬರ್ತಾ ಇದ್ದಾಳಲ್ಲ' ಎನ್ನುವಂತೆ ನನ್ನನ್ನೇ ಬೆರಗಾಗಿ ನೋಡಿದರು!

■

# ಸ್ಪರ್ಧೆ

**। ಸಿ.ಆರ್.ಸತ್ಯ**

ಹೊಸ ವರುಷದ ಆಚರಣೆಗೆಂದು ನಮ್ಮ ರಸ್ತೆಯ ಹಿರಿಯ ನಾಗರಿಕರೆಲ್ಲಾ ಒಟ್ಟಿಗೆ ಸೇರಿದ್ವಿ. ನಮ್ಮ ಸಂಘದ ಅಧ್ಯಕ್ಷರಾದ ಹಿರಿಯ ಹಿರಿಯ ನಾಗರಿಕರು (ಹಿಹಿನಾ) ನಮಗೆಲ್ಲಾ ಒಂದು ಸ್ಪರ್ಧೆಗೆ ರೆಡಿ ಆಗಿ, ಕೈನಲ್ಲಿ ಒಂದು ಪೆನ್ನು ಪೇಪರ್ ಇಟ್ಕೊಳ್ಳಿ ಅಂತ ಘೋಷಿಸಿದ್ರು. 'ಈಗ ನಾನು ಒಂದು ವಿಷಯ ಕೊಡ್ತೀನಿ. ಹತ್ತು ನಿಮಿಷ ಸಮಯ ಕೊಡ್ತೀನಿ. ಆ ವಿಷಯದ ಮೇಲೆ ನೀವು ಒಂದು ಲೇಖನ ಬರೆಯಬೇಕು. ಯಾರು ಹತ್ತು ನಿಮಿಷದಲ್ಲಿ ಉತ್ತಮ ಲೇಖನ ಬರಿತಾರೋ ಅವರಿಗೆ ಒಂದು ಪ್ರೈಜ್ ಕೊಡ್ತೀವಿ' ಅಂತ ಹೇಳಿದ್ರು. ನಾವು 'ರೆಡಿ' ಅಂದ್ವಿ. ಅವರು ಕೊಟ್ಟ ವಿಷಯ: "ರಮೇಶ್, ಉಮೇಶ್ ಅಣ್ಣ ತಮ್ಮಂದಿರು". ನಾನು ಹೀಗೆ ತಕ್ಷಣವೇ ಬರೆದೆ:

"ರಮೇಶ್ ಉಮೇಶ್ ಅಣ್ಣ ತಮ್ಮಂದಿರು. ಅಂದರೆ ಇದರ ಅರ್ಥ, ರಮೇಶ್ ಅಣ್ಣ ಮತ್ತು ಉಮೇಶ್ ತಮ್ಮ ಅಂತ. ಇದಕ್ಕೆ ಮತ್ತೊಂದು ಅರ್ಥ, ರಮೇಶ್ ಉಮೇಶನಿಗಿಂತ ದೊಡ್ಡವನು–ಯಾತಕ್ಕೆಂದರೆ, ಅವನು ಉಮೇಶನ ಅಣ್ಣ.

ಅದೇ ಲೆಕ್ಕದಲ್ಲಿ ಉಮೇಶ್ ರಮೇಶನಿಗಿಂತ ಚಿಕ್ಕವನು– ಯಾತಕ್ಕೆಂದರೆ, ಅವನು ರಮೇಶನ ತಮ್ಮ. ರಮೇಶ್ ಉಮೇಶನಿಗಿಂತ ಮುಂಚೆಯೇ ಹುಟ್ಟಿದ. ಅದಕ್ಕೇ ಅವನು ಅಣ್ಣ ಆದ. ಅದೇ ಲೆಕ್ಕದಲ್ಲಿ ಉಮೇಶ ರಮೇಶ ಹುಟ್ಟಿದ ಮೇಲೆ ಹುಟ್ಟಿದ. ಅದಕ್ಕೆ ಅವನು ತಮ್ಮ ಆದ. ಇನ್ನೊಂದು ಗಹನವಾದ ವಿಷಯವೆಂದರೆ, ರಮೇಶ್‌ಗೆ ಉಮೇಶನಿಗಿಂತ ಹೆಚ್ಚು ವಯಸ್ಸಾಗಿದೆ. ಏತಕ್ಕೆಂದರೆ ಅವನು ದೊಡ್ಡವನು. ಅದೇ ಲೆಕ್ಕದಲ್ಲಿ ಉಮೇಶ್‌ಗೆ ಕಡಿಮೆ ವಯಸ್ಸು ಆಗಿದೆ. ಏತಕ್ಕೆಂದರೆ ಅವನು ನಿಧಾನವಾಗಿ ಹುಟ್ಕೊಂಡ. ನಾನು ಈ ಅಣ್ಣ ತಮ್ಮಂದಿರನ್ನ ನೋಡಿಲ್ಲ. ಆದರೆ ನನ್ನ ಅಂದಾಜಿನ ಪ್ರಕಾರ, ರಮೇಶ್‌ಗೆ ಸ್ವಲ್ಪ ದಪ್ಪದ ಮೈಕಟ್ಟು, ಕುಳ್ಳ, ಅರ್ಧ 'ಬಾಲ್ಡ್', ಕಂಪ್ಯೂಟರ್ ಬಗ್ಗೆ ತಿಳಿವು ಕಡಿಮೆ–ಯಾಕೆ ಅಂದರೆ ಅವನು ಮುಂಚೆ ಹುಟ್ಟಿದ. ಅದೇ ಉಮೇಶ ಹುಟ್ಟಿದ ಎರಡು ವರುಷದಲ್ಲೇ ಕಂಪ್ಯೂಟರ್ ಎಕ್ಸ್ ಪರ್ಟ್ ಆದ. ಎಲ್ಲಾ ಇಂದಿನ ಮಕ್ಕಳುಗಳ ತರಹ ಹನ್ನೆರಡನೇ ವರುಷಕ್ಕೇ ಆರು ಅಡಿ ಎತ್ತರಕ್ಕೆ ಬೆಳೆದ. ಈಗ ಕೋಡಿಂಗ್, ಹ್ಯಾಕಿಂಗ್ ಅಂತ ಏನೇನೋನ್ ಮಾತಾಡ್ತಾನೆ. ರಮೇಶಗೆ ಸ್ಕೂಟರ್ ಬಿಡೋದಕ್ಕೆ ಗೊತ್ತಿಲ್ಲ–ಹೆದರಿಕೆ. ಅದೇ ಉಮೇಶ್ ವೀಲಿಂಗ್ ಕೂಡ ಮಾಡ್ತಾನೆ. ರಮೇಶ್‌ಗೆ ಮನೆ– "ಟೈಮ್ ಅಪ್!" ಅಂತ ಹಿಹಿನಾ ಕೂಗಿದ್ರು. ನಮ್ಮ ನಮ್ಮ ಕಾಗದಗಳನ್ನು ಅವರಿಗೆ ಒಪ್ಪಿಸಿ ಫಲಿತಾಂಶಕ್ಕೆ ಕಾಯ್ತಾ ಕೂತ್ವಿ. ಹಿಹಿನಾ ಅವರು ಇನ್ನೊಂದಿಬ್ಬರು ಹಿಹಿನಾಗಳ ಜೊತೆ ಮಾತನಾಡಿಕೊಂಡು ನಿರ್ಧಾರಕ್ಕೆ ಬಂದರು. "ಪಾತ್ರವಹಿಸಿದವರಿಗೆಲ್ಲಾ ಧನ್ಯವಾದಗಳು. ಎಲ್ಲರೂ ಚೆನ್ನಾಗಿ ಬರೆದಿದ್ದೀರಿ, ಎಲ್ಲರಿಗೂ ಮೊದಲನೇ ಬಹುಮಾನ ಅಂತ ಹೇಳೋಕ್ಕೆ ಸಾಧ್ಯವೇ? ಖಂಡಿತ ಇಲ್ಲ. ಹಾಗಾಗಿ ಈ ಸ್ಪರ್ಧೆಯಲ್ಲಿ ಮೊದಲನೇ ಪ್ರೈಜ್ ಗಳಿಸಿದವರು– ಇನ್ಯಾರೂ ಅಲ್ಲ, ನಮ್ಮ ಹಿರಿಯ ನಾಗರಿಕರಾದ, ಪ್ರಸಿದ್ಧ ಸಾಹಿತಿ ..............ಅವರೇ!" ಅಂತ ನನ್ನ ಹೆಸರನ್ನು ಘೋಷಿಸಿದರು. "ಮಾನ್ಯರಿಗೆ ನೂರು ರೂಪಾಯಿ ಬಹುಮಾನವನ್ನೂ ಕೊಡುತ್ತಿದ್ದೇವೆ. ದಯವಿಟ್ಟು ಬಂದು ನಮ್ಮ ಬಹುಮಾನವನ್ನು

ಸ್ವೀಕರಿಸಿ" ಅಂತ ನನ್ನನ್ನು ಕರೆದರು. ನಾನು ಅದನ್ನು ಸ್ವೀಕರಿಸಿದೆ. ಇದ್ದ ಹತ್ತು ಹನ್ನೆರಡು ಜನರು ಕೈಲಾದಷ್ಟು ಚಪ್ಪಾಳೆ ತಟ್ಟಿದರು. ಹಿಹಿನಾ ಅವರು " ಚಪ್ಪಾಳೆ ಇನ್ನೂ ಜೋರಾಗಿರಬೇಕಿತ್ತು. ಆದರೆ ಅರ್ಧ ಜನಕ್ಕೆ ಆರ್ಥರೈಟಿಸ್ ತೊಂದರೆ. ಚಪ್ಪಾಳೆ ಹೊಡಿಯೋದಕ್ಕೆ ಕಷ್ಟ. ಇರಲಿ ಬಿಡಿ. ಮಾನ್ಯರಿಗೆ, ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇವರ ಬರಹಗಳು ದೇಶಮಟ್ಟದಲ್ಲಿ ವಿಶ್ವ ಮಟ್ಟದಲ್ಲಿ ಖ್ಯಾತಿ ಪಡೆದು, ಕೇಂದ್ರ ಸಾಹಿತ್ಯ ಪ್ರಶಸ್ತಿ, ಬುಕರ್ ಪ್ರೈಜ್, ನೊಬೆಲ್ ಸಾಹಿತ್ಯ ಪಾರಿತೋಷಕ– ಇವೆಲ್ಲವೂ ಅವರಿಗೆ ಈ ಹೊಸ ವರುಷದಲ್ಲಿ ದಕ್ಕಲಿ ಎಂದು ಹಾರೈಸೋಣ!" ಅಂತ ಮಾತು ಮುಗಿಸಿದರು.

ಮನೆಗೆ ಬಂದು ನೂರು ರೂಪಾಯಿ ನೋಟನ್ನು ಹೆಂಡತಿಗೆ ತೋರಿಸಿದೆ. ಒಂದು ನಿಮಿಷ ಕೊಡಿ ಅಂತ ಅವಳು ಆ ನೋಟನ್ನೇ ಸೂಕ್ಷ್ಮವಾಗಿ ನೋಡಿದಳು. "ಇದು ನಕಲಿ ನೋಟ್ ರೀ! ನಿಮಗೂ ಕಣ್ಣು ಕಾಣಲ್ಲ, ಆ ನಿಮ್ಮ ಹಿಹಿನಾಗೂ ಕಣ್ಣು ಕಾಣಲ್ಲ. ಸಧ್ಯ ಈ ನೋಟನ್ನ ಯಾವ ಅಂಗಡೀಲೂ ಚಲಾಯಿಸೋಕ್ಕೆ ಹೋಗಬೇಡಿ. ಖೋಟಾ ನೋಟ್ ಅಂತ ಜೈಲ್‌ಗೆ ಹೋಗ್ತೀರ. ಆಮೇಲೆ ನಿಮಗೆ ದೆಹಲಿಗೆ, ಅಮೇರಿಕಾಗೆ, ಸ್ವೀಡನ್‌ಗೆ ಬಹುಮಾನಗಳನ್ನ ತೊಗೋಳೊಕ್ಕೆ ಹೋಗೋಕ್ಕೆ ಆಗುತ್ತೆ?" ಅಂತ ವ್ಯಂಗ್ಯವಾಗಿ ಹೇಳುತ್ತಾ ಅಡುಗೆ ಮನೆಗೆ ಹೋದಳು.

ಪ್ರಿಯ ಓದುಗರೇ, ನಿಮ್ಮಲ್ಲೂ ಪ್ರಸಿದ್ಧ ಬರಹಗಾರರಾಗಬೇಕೆಂದು ದೊಡ್ಡ ಭವಿಷ್ಯದ ಕನಸು ಕಾಣುತ್ತಿರುವವರು ಅನೇಕರಿರಬಹುದು. ಅದರಲ್ಲಿ ತಪ್ಪೇನಿಲ್ಲ. ಆದರೆ, ಯಾರಾದರು ನಿಮ್ಮ ಬರಹಕ್ಕೆ ಈ ರೀತಿ ಕ್ಯಾಶ್ ಪ್ರೈಜ್ ಕೊಟ್ಟರೆ ಹುಷಾರಾಗಿರಿ! ಆದರೆ ಬರವಣಿಗೆಯನ್ನು ಮಾತ್ರ ಮುಂದುವರಿಸುತ್ತಲೇ ಇರಿ. ನನ್ನ ತರಹ ಉತ್ತಮ ಸಾಹಿತಿ ಆಗಿ ಕನ್ನಡ ಸಾಹಿತ್ಯವನ್ನು ಉದ್ಧಾರ ಮಾಡಿ!

ಪೊಲೀಸರ ಸಹಾಯದಿಂದ 5300 ಗುಂಡಿ ಭರ್ತಿ.!ಸುದ್ದಿ



ನಾವು ಯ್ಯಾಕೊ ತಪ್ಪು ಮಾಡ್ತಾ ಇದ್ದಿವಿ ಅನಿಸುತ್ತೇ ಸರ್.!ಈ ಗುಂಡಿ ಸಹಾಯದಿಂದ ಕಳ್ಳರನ್ನ ಸುಲಭವಾಗಿ ಹಿಡಿತಿದ್ವಿ...!

# ಗೋಬಿಮಂಚೂರಿ ಪದ್ಯ

(ಅಣಕವಾಡು)

। ಚಿಂತಾಮಣಿ ಕೊಡ್ಲೆಕೆರೆ

'ಗೋಬಿ' ತಂದೀರಾ– ಭಿಕ್ಷಕೆ
'ಗೋಬಿ' ತಂದೀರಾ

ರಾಗಿ ಜೋಳ ಎಲ್ಲಾ ಹೋಯ್ತು!
ಅಕ್ಕಿ ಗೋದಿ ಬಿಟ್ಟಿದ್ದಾಯ್ತು!

'ಗೋಬಿ' ತಂದೀರಾ– ಭಿಕ್ಷಕೆ
'ಗೋಬಿ' ತಂದೀರಾ

ಕಾಲಿಫ್ಲವರಿಗೆ  ಎಣ್ಣೆ ಬಣ್ಣ
ಅಜಿನಮೋಟೋ ಹಾಕುವಿರಣ್ಣ

'ಗೋಬಿ' ತಂದೀರಾ– ಭಿಕ್ಷಕೆ
'ಗೋಬಿ' ತಂದೀರಾ

ಒಂದೋ ಎರಡೋ ರುಪಾಯಿ ಕೊಟ್ಟು
ಹೋಗೋ ದಾಸ ಅನ್ನೋದು ಬಿಟ್ಟು

'ಗೋಬಿ' ತಂದೀರಾ– ಭಿಕ್ಷಕೆ
'ಗೋಬಿ' ತಂದೀರಾ

ಬಾಳೆಹಣ್ಣು ಸೀಬೆ ಕೊಟ್ಟು
ಹೋಗೋ ದಾಸ ಅನ್ನೋದು ಬಿಟ್ಟು

'ಗೋಬಿ' ತಂದೀರಾ– ಭಿಕ್ಷಕೆ
'ಗೋಬಿ' ತಂದೀರಾ

ಬಡ ದಾಸಯ್ಯಗೆ ತಂಗಳು ಅನ್ನ
ಕೊಟ್ಟರು ತಣ್ಣಗೆ ಉಣ್ಣುವೆನಮ್ಮ

'ಗೋಬಿ' ತಂದೀರಾ– ಭಿಕ್ಷಕೆ
'ಗೋಬಿ' ತಂದೀರಾ

ಬಡ ದಾಸಯ್ಯಗೆ ರಾಗಿಹಿಟ್ಟು
ಬೊಗಸೆ ಕೊಟ್ಟರೂ ಅದೇ ಸಾಕಷ್ಟು

'ಗೋಬಿ' ತಂದೀರಾ– ಭಿಕ್ಷಕೆ
'ಗೋಬಿ' ತಂದೀರಾ

ಕೆಂಪಂಗಿಯ ಈ ಗೋಬಿ ನೋಡಿ
ದಾಸಯ್ಯ ಹೆದರಿ ಹೋಗುವ ಓಡಿ

'ಗೋಬಿ' ತರಬೇಡೀ  – ಭಿಕ್ಷಕೆ
'ಗೋಬಿ' ತರಬೇಡೀ

■

# ಏನೋ ಹೋಗಲಿಂತ..

**ಕೆ.ಎಸ್. ಶ್ರೀಶೈಲನ್**

ಏನೋ ಹೋಗಲಿಂತ.... .. ಅಂತ ಸುಮ್ಮನಿದ್ದೆ ಮೊದಲನೇ ಸಲ, ಎರಡನೇ ಸಲ, ಮೂರನೇ ಸಲ ಸರಿ. ಆದರೆ ಎಷ್ಟು ಸಲೀಂತ ಸುಮ್ಮನಿರೋದು. ಕೊನೇಗೊಂದ್ಸಲ ಅವಳನ್ನೆ ಕೇಳಿದೆ. 'ಯಾಕೆ ನನ್ನ ಕೆನ್ನೆ ಗಿಲ್ಲೋದು ಅದೂ ಅಷ್ಟು ಸಲ' ಅಂತ ಗಂಡ ಕೇಳಬೇಕಾದ ದನಿಯಲ್ಲಿ. ಆದರೆ ಈ ಗಂಡಿನ ಗಂಡುತನ ಅವಳಲ್ಲೇನು ನಡೆಯಲಿಲ್ಲ. ಅವಳು ಅವಳ ಗಂಡನ ತಾಯಿಯ ಧ್ವನಿಯಲ್ಲಿ " ಈಗ, ಆಗ ಅಂತ ಒಂದೊಂದ್ಸಲ ನಾನ್ ಗಿಲ್ಲಿದ್ರೆ, ಏನ್ ಮಹಾಬಿಡಿ", ಅಂದು ಬಿಡೋದ. ಎಷ್ಟಾಗಲಿ ಅಕ್ಕನ ಮಗಳು 'ಏನು ಹೋಗಲೀಂತ' ಬಿಟ್ಟೆ' ಆಗ ಅಲ್ಲಿಂದ ಬಂತು ನೋಡಿ ಈ ಪರದಾಟ.

ನಾನೇನೋ ಅವಳ ಗುಂಡನೆಯ ಕೆನ್ನೆ (ಮೈಯ್ಯೂ ಹಾಗೇ ಅನ್ನಿ) ಜಿಗುಟುತ್ತ ಇದ್ದದ್ದು ನಿಜ ಕೈಗೆ ಅಚ್ಚು ಕಟ್ಟಾಗಿ ಸಿಗುತ್ತೆ ಅಂತ. ಆದರೆ ಒಳಗಿಂದ ನಾಲ್ಗೇಲಿ ಚುಚ್ಚಿ ಎತ್ತಿಕೊಡೋ ತನಕ ಯಾರ ಕೈಗೂ ಸಿಗದೆಯಿರೋ ಗುಳಿಬಿದ್ದಿರೋ ನನ್ನ ಕೆನ್ನೇನ ಜಿಗುಟಿ ಇವಳೇನು ಖುಷಿ ಪಟ್ಟಾಳು ಎಂಬ ಅನುಮಾನದಲ್ಲಿ ಅವಳನ್ನ ಅದನ್ನೆ ಕೇಳಿದೆ. ಅವೆಲ್ಲ ನಮ್ಮ ನಮ್ಮ ಖುಷಿಗೆ. ಅದನ್ನೆಲ್ಲ ಕೇಳೋ ಅಧಿಕಾರ ನಿಮಗಿಲ್ಲ" ಅಂದು ಬಿಟ್ಟಳು. ಬೇರೇನು ಮಾಡೋದು "ಏನೋ ಹೋಗಲೀಂತ" ಬಿಟ್ಟೆ.

ಅದು ಇಲ್ಲಿಗೆ ನಿಲ್ಲಲಿಲ್ಲ. ಹಾಗೇ ಮುಂದುವರೀತು ಹೀಗೆ ಕೂತು ಕೂತಂತೆ, ಏನೋ ನೆನಪು ಬಂದು 'ಏ ಕಲ್ಲೂ (ಅಕ್ಷರ ಕಮ್ಮಿ ಆದರೆ ಪ್ರೀತಿ ಜಾಸ್ತಿ ಆಗುತ್ತೇಂತ ಯಾರೋ ಹೇಳಿದ್ರೂ ಅಂತ ಕಲ್ಯಾಣೀನ ಕಲ್ಲೂ ಮಾಡಿದ್ದೆ).

.. ನಾವಿಬ್ಬರೂ ಚಿಕ್ಕ ವಯಸ್ಸಿನಲ್ಲಿ ; ಕಲ್ಲೋ, ಮಣ್ಣೋ' ಆಡ್ತಿದ್ದವಲ್ಲ. ಜ್ಞಾಪಕ ಇದೆಯೋ" ಪ್ರೀತಿಯಿಂದ ಕೇಳಿದೆ. ಒಂದೇ ಹುಮ್ಮಸ್ಸಿನಲ್ಲಿ ಎದ್ದು, 'ನೀನು ಸೋತು ಅಳುತ್ತ ಕೂತಿರ್ತಿದ್ದೆ. ನಾನು ನಿನ್ನ ಕಿವಿ, ಹೀಗೆ . ಹೀಗೆ ಹಿಡಿದು ಎಳಕೊಂಡು ಬಂದು... ಕಥೆ ಎಲ್ಲಿಗೆ ಹೋಗ್ತಿತ್ತೋ. ಇವಳ ದಪ್ಪ ಕೈಯನ ಹಿಡಿತ ಕೊಟ್ಟ ನೋವಲ್ಲಿ 'ಏಯ್, ಕಿವಿ ಬಿಡೆ, ನೋವತ್ತೆ' ಅಂತ ಕಿರುಚಿದೆ. ಅವಳು ಇದರ ಯಾವ ಪರಿವೆಯೂ ಇಲ್ಲದೆ. "ಹಾಂ. ಹೀಗೆ ಹೀಗೇನೆ ಕುಯ್ಯೊ ಮುರ್ರೋ ಅಂತ ಅಳತಿದ್ದೆ. ಜ್ಞಾಪಕ ಇದೆಯಾ" ಅಂತಂದು, ನನ್ನೇ ನೋಡ್ತಾ ನಿಂತಳು. "ಎಗರಿ ಒಂದ್ಸಲ ಒದೀಲ ಅನ್ನಸ್ತು. ಆದರೆ ಹಾಗೆ ಮಾಡಿದರೆ ನನ್ನ ಕಾಲಿಗೆ ಆಪತ್ತು ಅಂದುಕೊಂಡು "ಏನೋ ಹೋಗಲೀಂತ" ಬಿಟ್ಟೆ.

"ಏನೇ ಗಂಡನ ಕೀವಿನೇ ಗಿಂಡ್ತಾ ಇದ್ದಿ", ಅತ್ಕೊಂಡು ಅತ್ಕೊಂಡು ಹೇಳಿದೆ. ಅವಳು ಬಹಳ ಸಿಂಪಲ್ ಆಗಿ ದೇಶಾವಾರದ ನಗೆ ಬೀರುತ್ತ "ಹಳೇ ನೆನಪೂಂದ್ರೆ" ಅಂತ ಆರಾಮವಾಗಿ ಜಾರಿಕೊಂಡ್ಳು"

ಈ "ಹಳೆ ನೆನಪೂಂದ್ರೆ" ಸತತವಾಗಿ ಹೊತ್ತು ಗೊತ್ತು ಇಲ್ಲದೆ ನನ್ನ ಮೇಲೆ ಪ್ರಯೋಗ ನಾನಾ ರೀತೀಲಿ ಆಗಾಗ ಆಗ್ತಾನೆ ಇರೋದು. ಈ ಏಕತಾನದ ಹಾಡಿನ ಪಲ್ಲವೀನೂ ಅದೇನೆ. ಚರಣವೂ ಅದೇನೆ. ಸರಿ.. "ಏನೋ ಹೋಗಲಿಂತ"

ಬಿಟ್ಟೆ. ಇನ್ನೇನು ತಾನೆ ಮಾಡ್ತೀರ ನಾನು ಹುಟ್ಟಿದ ನಾಲ್ಕನೇ ದಿನಕ್ಕೆ, ಅವರಮ್ಮನ ಜೊತೇಲಿ ಬಂದ ಹುಡುಗನೊಬ್ಬ 'ಅಮ್ಮ ಈ ಹೆಗ್ಗಣಕ್ಕೆ ಬಾಲ ಎಲ್ಲಮ್ಮ' ಎಂದಿದ್ದನಂತೆ ಹಾಗಿತ್ತು ನನ್ನ ಪರ್ಸನಾಲಿಟಿ. ಹುಟ್ಟಿದ ಎಷ್ಟು ದಿನವಾದರೂ, ಆಕಾರ ಅದಲು ಬದಲು ಆಗದಿದ್ದರು, ನಾನು ಎಂಟನೆಯವನಾದ್ದರಿಂದ ನನಗೆ 'ಕೃಷ್ಣ' ಅಂತ ಹೆಸರಿಟ್ಟು ಯಾವ ಟಾನಿಕ್ಕು, ಲೇಹ್ಯಕ್ಕು ಬೆಳಯದಿದ್ದ ಕಾರಣ ಮನಸ್ಸಲ್ಲೇ 'ಕೃಷ್ಣಾರ್ಪಣ' ಅನ್ಕೊಂಡು ಬಿಟ್ಟಿದ್ದರಂತೆ. ಊಟದಷ್ಟೇ ಔಷಧಗಳನ್ನ ಕೊಟ್ರು ಕೂಡ ದೇಹ ತುಂಬದೆ, ಬುದ್ದಿ ಬೆಳಸಿ. ಇದೇ ಜೋಳದ ಕಡ್ಡಿ ಕೃಷ್ಣನ್ನ ಬಿಇ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಮಾಡಸ್ತೇ ವಿನಹ ದೇಹ ಬೆಳೀಲೇ ಇಲ್ಲ, ಅಂತಾರೆ ಅಪ್ಪ.

ಈಗಲೂ ನಾನು ಓಡಾಡ್ಕೊಂಡು ಆರೋಗ್ಯವಾಗಿರೋದು ನನ್ನ ಹೆಂಡತಿ ತಾಳಿಭಾಗ್ಯನೇ ಸರಿ ಅಂತ ಇನ್ನೊಬ್ಬರ ಎದೆ ತಟ್ಟಿ ಹೇಳಬಲ್ಲೆ' (ನನ್ನ ಎದೆ ಗಟ್ಟಿ ಇಲ್ಲವಲ್ಲ!) ಈ ಕಾರಣಕ್ಕಾಗೆ ನನಗಿಂತ ಕೇವಲ 4–5 ಪಟ್ಟು ದಪ್ಪವಾಗಿದ್ದ, ಗಟ್ಟುಮುಟ್ಟಾದ ಹಳ್ಳಿ ಹುಡುಗಿನ, ನಮ್ಮಕ್ಕನಿಗೆ ಒಪ್ಪಿಗೆ ಇಲ್ಲದಿದ್ದರೂ ಬಲವಂತವಾಗಿ ಒಪ್ಪಿಸಿ, ನನ್ನಿಂದ ತಾಳಿ ಕಟ್ಟಿಸಿದರು. – ನನ್ನ ಹೆಸರ ಮುಂದೆ ಬಿ.ಇ. ಇತ್ತಲ್ಲ ಇದಕ್ಕಿಂತ ಇನ್ನೇನು ಬೇಕಾಗಿತ್ತು.

ಇಂತ ಅಂಗ ಸೌಷ್ಟವ ಇರುವ ನನ್ನ ಹೆಂಡತಿಯ ಮುಂದೆ ಏನು ತಾನೇ ಮಾಡಲಿಕ್ಕೆ ಬರುತ್ತೆ ಹೇಳಿ! ಆದರೂ "ಏನೋ ಹೋಗಲೀಂತ" ಎಲ್ಲ ಬಿಟ್ಟು 'ನನ್ನ ಗಂಡನ' ತನ ಒಂದನ್ನ ಉಳಿಸಿಕೊಂಡು ಬಂದಿದೀನಿ.

ಈಗ ಸಧ್ಯಕ್ಕೆ ಮನೇಲಿ ನಾವಿಬ್ಬರೆ ಇರೋದರಿಂದ, ಊಟಕ್ಕೆ ನಾವಿಬ್ಬರೇ ಕೂತಕೋತೀವಿ ಒಂದ್ಸಲಿ ಊಟ ನೆತ್ತಿ ಹತ್ತಿತು. ನೆತ್ತಿ ಮೇಲೆ 'ಬಡಿದ್ಲು, ಬಡಿದ್ಲು ಹಾಗೆ ಬಡಿದ್ಲು" ಮೇಲೆ ನೋಡಿ ಹಾಳಾದ್ದು ಏನು ಅವಸರವೋ' ಅಂದ್ಲು. ಅವಳು ಬಡಿದಿದ್ದ ಗಟ್ಟಿತನದಲ್ಲಿ ತಲೆ ತಾನಾಗೇ ಮೇಲೆ ಬರಲಿಲಲ್ಲ. ತಾನೇ ನನ್ನ ಕತ್ತನ್ನ ಮೇಲಕ್ಕೆತ್ತಿ. 'ಅಲ್ಲಿ ಹಲ್ಲಿ ಇದೆ, ನೋಡಿ ನೋಡಿ' ಅಂದ್ಲಾ; ಅಲ್ಲಿ ಯಾವುದು ಇರಲಿಲ್ಲ. ಇನ್ನು ಇಲ್ಲ ಅಂದ್ರೆ ಇವಳು ಕತ್ತು ಬಿಡಲ್ಲ ಅನ್ನೋ ಸಂಕಟಕ್ಕೆ, 'ಹೌದು ಇದೆ' ಎಂದೆ. 'ಈಗ ಎಲ್ಲಾ ಸರಿಹೋಗುತ್ತೆ" ಅಂದ್ಲು ಇವಳ ಹೊಡತದಿಂದಲೋ, ತಾನಾಗಿಯೋ ಎಲ್ಲಾ ಸರಿ ಹೋಗಿ ಶಮನವಾಯ್ತು. "ಇದಕ್ಕೆ ಇನ್ನೂ ಕೆಲಸ ಇದೆ" ಅಂತ ಅವಳ ನವುರಾದ ಕೈಯಲ್ಲಿ ನನ್ನ ಬೆನ್ನಿಗೆ ಎರಡು ಇಕ್ಕಳಿಸಿದಳು. ಅದರ ರಭಸಕ್ಕೆ ಗಂಟಲಿನಲ್ಲಿ ಉಳಿದಿದ್ದ ಅರ್ಧ ಅನ್ನ ಹೊರಕ್ಕೆ ಗೊಳಕ್ ಅಂತ ಬಂತು. ಕಣ್ಣಲ್ಲಿ ನೀರು ತುಂಬಿಕೊಂಡಿತು. " ಇದೇನೇ ಉಸಿರು ಸಿಕ್ಕೋಳೋ ತರಹ ಗುದ್ದುತಾ ಇದೀಯ" ಬಲು ದೀನತೆಯಲ್ಲಿ ಕೇಳಿದೆ, ಆದರೆ ಅವಳು ತನ್ನ ಕರ್ತವ್ಯ ಪಾಲಿಸ್ತಾ ಇದ್ದಳಂತೆ 'ನೆತ್ತಿ ಹತ್ತಿ, ಉಸಿರು ಸಿಕ್ಕಿ ಹಾಕಿಕೊಂಡು ಏನಾರು ಆದ್ರೆ ಯಾರು ಹೊಣೆ, ಉಸಿರೆತ್ತಬೇಡಿ" ಅಂದಳು ಉಸಿರೆತ್ತಲಿಲ್ಲ ದೊಡ್ಡದಾಗಿ ಉಸಿರು ಬಿಟ್ಟೆ. ಕಾರಣವೇನೇ ಇರಲಿ, ನನ್ನನ್ನು ಸರಿಯಾಗಿ ನೋಡಿಕೊಳ್ಳುವ ಜವಾಬ್ದಾರಿ ಅವಳದಾಗಿದ್ದ ಕಾರಣ ಈ ತರಹದ ಅವಳ ಕಾರ್ಯಕ್ರಮ ಜಾಸ್ತಿಯಾಯಿತು ಈ ತರಹದ ಉಪಚಾರದಲ್ಲಿ ನನಗೇನೂ ಆಗದಿರಲಿ ಅಂತ ನಾನೇ ಮುಂಜಾಗ್ರತೆಗಾಗಿ, ಮುತವರ್ಜಿ ವಹಿಸಿ ಐದು ಲಕ್ಷಕ್ಕೆ ಇನ್ಶೂರ್ ಮಾಡಿಸಿದೆ. ಹಾಗೇ ಏನೇ ಆದರೂ, ಅವಳ ಒಂದು ಅಂಗಿಯಲ್ಲಿ ನನಗೆ ಎರಡು ಅಂಗಿಗಳಾಗಿ ಇನ್ನೂ ಮಿಕ್ಕಿದರೂ ಸಹ, ನಡವಳಿಕೆಯಲ್ಲಿ

ಅರ್ಧಾಂಗಿ ತಾನೇ "ಏನೋ ಹೋಗಲೀಂತ.." ಅವಳಿಗೂ ಎರಡು ಲಕ್ಷಕ್ಕೆ ವಿಮಾ ಮಾಡಿಸಿದೆ.

ಈ ಮಧ್ಯೆ ನಮ್ಮಿಬ್ಬರಿಗೂ ಬೇರೆ ಬೇರೆಯಾಗಿ ಸಲಹೆ ನೀಡುವ ಇಬ್ಬರು ಜನ ಸಿಕ್ಕಿದ್ದಾರೆ. ಅವರು ನನಗೆ ಹೇಳಿದ್ದೇನೆಂದರೆ.

"ಮೊದಲಿಗೆ, ನೀವು ಮಾತು ಕಮ್ಮಿಮಾಡಿ ಹಾಗೂ ಗಟ್ಟಿಯಾಗಿ ಮಾತಾಡಬೇಡಿ, ಮೊದಲೇ ಹೀಗಿರುವ ನಿಮಗೆ ದೇಹದಲ್ಲಿ ಸಾಕಷ್ಟು ಎನರ್ಜಿ ಕೂಡಿಬರುತ್ತೆ. ನೀವು ಶಕ್ತಿವಂತರಾಗ್ತಿರಿ, ಅನ್ನಕಮ್ಮಿ ಮಾಡಿ, ಹಣ್ಣು, ಹಂಪಲು, ಹಾಲು ಜಾಸ್ತಿ ಮಾಡಿ" ಅಂದಿದ್ದರು. ಎಲ್ಲದಕ್ಕೂ 'ಹೂಂ' ಅಂದೆ ಅವರು ಹೇಳಿದ್ದರಲ್ಲಿ ಕಮ್ಮಿದು ಕಮ್ಮಿ ಆಯ್ತೆವಿನಹ ಜಾಸ್ತಿದು ಜಾಸ್ತಿ ಆಗಲೇ ಇಲ್ಲ. ಈವಾಗ ನಾನು ಹೆಚ್ಚು ಕಮ್ಮಿ ಮನೆಯಲ್ಲಾಗಲಿ, ಹೊರಗಾಗಲಿ ಮೌನಿ, ಮಾತು ಕಮ್ಮಿ.

ನನ್ನ ಹೆಂಡತಿಯ ಸಲಹೆಗಾರರು ಅವಳಿಗೆ ಡಯಟ್ ಫಿಕ್ಸ್ ಮಾಡಿದ್ದಾರೆ. ಬೆಳಿಗ್ಗೆ 6 ಗಂ ಗೆ ಕಾಫಿ. 12ಕ್ಕೆ ಊಟ ಮತ್ತು ಹಣ್ಣು 2.30 ಟೀ, 5ಕ್ಕೆ ತಿಂಡಿ ಕಾಫಿ, 7ಕ್ಕೆ ದೇವರಿಗೆ ದೀಪಹಚ್ಚಿ, ನೈವೇದ್ಯ ಮಾಡಿದ ಯಾವುದಾದರೂ ಹಣ್ಣುಗಳು ರಾತ್ರಿ 9.30ಗೆ ಹಾಲು ಹೀಗೆ ನಿಯಮಿತ ಆಹಾರದಲ್ಲಿದಾಳೆ ಅದರೊಂದಿಗೆ ನನ್ನ ಹತ್ತಿರ ದೂರು ಬೇರೆ. "ರಾತ್ರಿ ಹೊತ್ತು ಯಾಕೋ ಸರಿಯಾಗಿಹಸಿವೇ ಆಗಲ್ಲಾರಿ" ಇದಕ್ಕಾಗಿ ನರ್ಸಿಂಗ್ ಹೋಮ್‌ಗೆ ನನ್ನ ಹೆಂಡತಿ ವಿಸಿಟ್ ಕೊಡ್ತಿದಾಳೆ.

"ನಿನ್ನ ಜೋತೇಲಿ ಒಂದು ದಿವಸ ಡಾ॥ ಹತ್ತಿರ ಹೋಗುವಾಗ ನನ್ನೂ ಕರೆದುಕೊಂಡು ಹೋಗೆ" ಅಂದರೆ "ನಿಮಗೇನಾಗಿರೋದಕ್ಕೆ ಸುಮ್ಮನಿರಿ ಸಾಕು" ಅಂದಳು. "ಏನೋ ಹೋಗಲೀಂತ" ಸುಮ್ಮನಾದೆ.

ಮೊನ್ನೆ ಯಾರ ಮನೆಯ ಫಂಕ್ಷನ್‌ಗೆ ಹೋಗಬೇಕಾಗಿತ್ತು. ಇಬ್ಬರೂ ಹೊರಟ್ವಿ ಯಾತಕ್ಕೂ ಇದು ನಿನ್ನ ಹತ್ತಿರ ಇರಲಿ 'ಅಂತ 100ರೂ ಕೊಟ್ಟೆ ಮಿಕ್ಕಿದ್ದು ಕೇಳಲಿಲ್ಲ. ಇದೇ ತರಹ ದೇವಸ್ಥಾನಕ್ಕೆ ಹೋದಾಗಲೂ ಸಹ ಆಯ್ತು.

ಮರುದಿನ ನನ್ನ ಟೇಬಲ್ ಮೇಲೆ ಒಳ್ಳೆ ಗಣೇಶನ ಮೂರ್ತಿ ಇತ್ತು. ಕೇಳಬಾರದಾಗಿತ್ತು. ಕೇಳಿಬಿಟ್ಟೆ "ಎಲ್ಲೀದೇ ಇದು" "ನೀವು ಕೊಟ್ಟಿದ್ದರಲ್ಲಿ, ಹಣ ಮಿಕ್ಕಿತ್ತು ಅದರಲ್ಲಿ ತಂದೆ ಅಂದಳು. ಅದೇನು ವಿಷಗಳಿಗೇನೋ 'ಶಹಬಾಷ್' ಎಂದೆ ಮರುಕ್ಷಣದಲ್ಲೆ ಬಿತ್ತು ಏಟು "ಇಷ್ಟಕ್ಕೆ ಶಹಬಾಷ್' ಅಂತೀರಲ್ಲ, ಪೂರ್ತಿ ಸಂಬಳವನ್ನ ನನ್ನ ಕೈಲಿ ಕೊಡಿ ಆಗ ನೋಡಿ" ದನಿ ಏರಿಸಿ ಹೇಳದ್ಲು. ಸರಿ ಬೇರೇನು ಮಾಡೋದು "ಏನೋ ಹೋಗಲೀಂತ" ಒಪ್ಪಿದೆ. ಕೊಟ್ಟೆ, ಒಂದ ಸಲಿ ಅಲ್ಲ ಪ್ರತಿ ಸಲ. ಗಂಡನತನ ಉಳಿಸ್ಕೋಬೇಕಲ್ಲ.

ಜನ ಹೇಳ್ತಾರಲ್ಲ ಒಂದು ಸುಳ್ಳು ಮತ್ತೊಂದು ಸುಳ್ಳಿಗೆ ಅಡಿಪಾಯವಾಗುತ್ತೆ ಅಂತ ಹಾಗೆ ಒಂದ್ಸಲಿ "ಏನೋ ಹೋಗಲಿಂತ.." ಬಿಟ್ಟಿದಕ್ಕೆ ಅದೆಷ್ಟು ಸಲ ಹೀಗೇನೆ 'ಏನೋ ಹೋಗಲಿಂತ' ಬಿಡಬೇಕಾಯಿತು.

ಅವಳ ದೇಹ ಪ್ರಕೃತಿ ಕೊಂಚವಾತದ್ದು (ಗಾತ್ರದ್ದು) ಇತ್ತೀಚೆಗೆ ಅವಳಿಗೆ ಕೈ, ಕಾಲು, ಕೆನ್ನೆ ಊದುಕೊಳ್ಳುತ್ತೆ. ಬಿಸಿನೀರು ಶಾಖ ಕೊಟ್ಟುಕೊಂಡರೆ ಬೇಗ ವಾಸಿಯಾಗುತ್ತೆ ಅಂತ ಯಾರೋ ಹೇಳಿದರು. ಸರಿ ಬಿಸಿನೀರು ಕಾಯಿಸಿ ಶಾಖ

ಕೊಡೋದು ನನ್ನ ಕರ್ತವ್ಯ ಅಂತ ಆರಂಭಿಸಿದೆ, ಕಾಫಿ, ಟೀ ಅಡಿಗೇನೂ ನನ್ನದೇ ಡಿಪಾರ್ಟ್‌ಮೆಂಟ್. ಬರ್ತಾ ಬರ್ತಾ ನನ್ನ ಆಫೀಸ್ ಕೆಲಸಕ್ಕಿಂತ ಇದೇ ಜಾಸ್ತಿಯಾಯಿತು.

ನಮ್ಮ ದೇಶದಲ್ಲಿ ಒಂದು ನಂಬಿಕೆ ಇದೆ ಪತಿಯೇ ದೈವ, ಅವನಿಗೆ ಶುಶ್ರೂಷೆ ಮಾಡಿದರೆ ಸದ್ಗತಿ ಸಿಗುತ್ತೆ ಅಂತ ಹಿರಿಯರು ಹೇಳ್ತಾರೆ. ಆದರೆ ಈಗ ಕಲಿಗಾಲ ಎಲ್ಲಾ ಉಲ್ಟ – ಪಲ್ಟ ಅಲ್ವ! ನನಗೀಗ ಏನನ್ನುತ್ತೆ, ಪತಿಯಾದವ ಪತ್ನಿಗೆ ಈ ರೀತಿಯ ಶುಶ್ರೂಷೆ ಮಾಡಿದರೆ, ಆಗ ನನಗೆ ಯಾಕೆ ಸದ್ಗತಿ ಸಿಗಲ್ಲ ! ಹೀಗೆ ಪತ್ನಿ ಶುಶ್ರೂಷೆ ಮಾಡ್ತಾನೆ ಇದೀನಿ. ಯಾರೂ ಏನೂ ನಗಬೇಕಿಲ್ಲ.

ಒಬ್ಬರಿಗೊಬ್ಬರು, ಯಾರು ಯಾರಿಗೆ ಆದರೆ ಏನು? ನನಗೂ ಸದ್ಗತಿ ಸಿಕ್ಕೇ ಸಿಗುತ್ತೆ 'ಏನೋ ಹೋಗಲೀಂತ' ಯೋಚ್ನೆ ಮಾಡ್ದೆ ಬಿಟ್ಟು ಬಿಡಿ ಅಷ್ಟೆ. ನನಗೆ ಸದ್ಗತಿ ಸಿಗತ್ತಲ್ಲ.

■

## ಓದುಗರ ಪ್ರತಿಕ್ರಿಯೆ

ನಾನು ನನ್ನ ಶಾಲಾ ದಿನಗಳ ಕಾಲದಿಂದ ಕೊರವಂಜಿಯನ್ನು ಓದುತ್ತಿದ್ದೆ. ನಾವಾಗ ಗಾಂಧಿ ಬಜಾರ್ ನಲ್ಲಿದ್ದೆವು. ಆಗ ದಾಶರಥಿ ದೀಕ್ಷಿತ್ ಅವರು ಸಂಜೆಯ ಹೊತ್ತು ಗಾಂಧಿ ಬಜಾರಿನಲ್ಲಿದ್ದ ಅವರ ತಮ್ಮನ ಅಂಗಡಿಗೆ ಬರುತ್ತಿದ್ದರು. ಈಗೊಂದು ವರ್ಷದಿಂದ ನನ್ನ ಸ್ನೇಹಿತರು ಅಪರಂಜಿಯನ್ನು ನನಗೆ ಉಡುಗೊರೆಯಾಗಿ ಕಳುಹಿಸುತ್ತಿದ್ದಾರೆ. ಈಗ ನಾನು ಸಹ ನನ್ನ ಸ್ನೇಹಿತರಿಗೆ ಅಪರಂಜಿಯನ್ನು ಉಡುಗೊರೆಯಾಗಿ ಕೊಡಬಯಸುತ್ತೇನೆ. ಅಪರಂಜಿ ತುಂಬಾ ಚೆನ್ನಾಗಿ ಬರುತ್ತಿದೆ. ನಾನು ಓದಿ ಸಂತೋಷ ಪಡುತ್ತಿದ್ದೇನೆ. ಅಪರಂಜಿಯನ್ನು ನಿರಂತರವಾಗಿ ಪ್ರಕಟಿಸುತ್ತಿರುವ ಕೊರವಂಜಿ ಅಪರಂಜಿ ಟ್ರಸ್ಟ್ ಬಳಗಕ್ಕೆ ಧನ್ಯವಾದಗಳು

**ಡಾ. ಟಿ. ಗೋಪಾಲ್,** 9151 D

ಈ ತಿಂಗಳ ಅಪರಂಜಿಯ ಜೋಳಿಗೆಯಲ್ಲಿ ಕೊರವಂಜಿಯ ಸರಕು ತುಂಬಾ ಸಂತಸವಾಯ್ತು. ಕಾರಂತರು, ಭೈರಪ್ಪ, ಕೆ.ಎಸ್.ನ. ಬೀಚಿ, ರಾಶಿಯವರ ನೆನಪುಗಳನ್ನು ದಾಖಲಿಸಿರುವ ಸಂಚಿಕೆ ಅಮೂಲ್ಯ, ಅಪರೂಪ. ಸಂಚಿಕೆ ನೋಡುತ್ತಿದ್ದಂತೆ ಕೊರವಂಜಿಯಲ್ಲಿ ಆರ್.ಕೆ. ಲಕ್ಷ್ಮಣ್, ಆರ್.ಮೂರ್ತಿಯವರ ವ್ಯಂಗ್ಯಚಿತ್ರಗಳು, ನೆನಪಾದವು. ರಾಶಿಯವರ ಹಾಸಿದ ನಗೆ ಮಲ್ಲಿಗೆಯ ಹಾಸು ಸುಗಮವಾಗಿ ಸಾಗುತ್ತಿರುವುದು ಸಂತಸ ತಂದಿದೆ. ಅಣಕ ಸಂಚಿಕೆಯ ಎಲ್ಲರಿಗೂ ವಂದನೆಗಳು

ಜಿ. ರಾಜನ್, ತುಮಕೂರು – 5351 L

# ಶುದ್ಧ ಕನ್ನಡ........

**। ನಾಗರಾಜ ನಾಯಕ್**

ಆಗ ತಾನೇ ಕಾರವಾರದ ಅನುದಾನಿತ ಪ್ರೌಢಶಾಲೆಯಲ್ಲಿ ಸೇವೆಗೆ ಸೇರಿದ್ದೆ. ಹಾಗಾಗಿ ಸ್ಥಳದ ಬಗ್ಗೆ ನನಗೇನೂ ಮುಜುಗರ ಅನಿಸಲಿಲ್ಲ. ಒಬ್ಬಂಟಿಗನಾಗಿದ್ದ ನನಗೆ ಅಂಚೆ ಕಛೇರಿಯ ಗುಮಾಸ್ತನ ಜೊತೆಗೆ ಇರಲು ವ್ಯವಸ್ಥೆಯೂ ಆಗಿತ್ತು. ದೋ...ಎಂದು ಒಂದೆ ಸಮನೇ ಮಳೆಯ ಅರ್ಭಟದ ನಡುವೆ ಹೇಗೋ ಕರೆದುಕೊಂಡು ಬಂದರು. ಸುತ್ತಲೂ ಗಿಡ–ಮರಗಳಿಂದ ಆವರಿಸಿದ ಕಂದರದಂತಿದ್ದ ಮನೆಯ ಬಾಗಿಲ ಹತ್ತಿರ ನಿಲ್ಲಿಸಿ ಮಾಲಿಕನಿಗೆ ಬಿಡಲು ಬಂದಿದ್ದ ವ್ಯಕ್ತಿ ಮಾಲಿಕನ ಕೈಯಲ್ಲಿ ನನ್ನನ್ನು ಒಪ್ಪಿಸಿ ಯಾವುದೋ ತಿಳಿಯದ ಭಾಷೆಯಲ್ಲಿ ಗೊಣಗಿದ.

'ಪಾತ್ರಮ್ ಹಾಂವ್ ಹೆ ಚಲ್ಯಾಕ ಸೋಡ್ತಾ' ಅಂದನು. ಹಾಂವ್ ಅನ್ನುತ್ಲೇ ಕಕ್ಕಾಬಿಕ್ಕಿಯಾಗಿ ಎಲ್ಲಿದೆ ಹಾವು ಅಂತ ದಿಗಿಲಾಗಿ ಅತ್ತಿತ್ತ ಹುಡುಕಿದೆ. ಕತ್ತಲು ಬೇರೆ ಕವಿದಿತ್ತು, 'ಹಾ...ಬರೋ' ಅಂತ್ಲೇಳಿದರು. ಅರೇ ನನಗೆ ಬಾರೋ ಅಂದರೇನೊ.....? ಅಂತ ಅರಿತು ಅವರನ್ನ ಹಿಂದಕ್ಕಿಸಿ ಮನೆಯ ಒಳಗಡೆ ನುಗ್ಗಿದೆ. ಅದೇ ಕ್ಷಣ ಮಾಲಿಕರು 'ಕಿತೇ ಕಿತ್ಯಾಕ, ಕೋಣ್ ಅಂತ್ಲೇಳಿ..? ನನ್ನನ್ನು ಪ್ರಶ್ನೆ ಮಾಡಿದರು.

ನನ್ಗ ಮತ್ತ ಕೋಪ ಏರದಂಗಾತು 'ಕೋಣ–ಗೀಣ' ಅಂತಾನಲ್ಲೋ ಈ ಮುದ್ಕ ಅಂತ ಮತ್ತೆ ಮೌನವಾದೆ.

'ನಮಸ್ಕಾರ' ಎಂದು ಕೈ ಮುಗಿದ. ನಾನು ವಿನಯದಿಂದಲೇ ಪ್ರತಿಕ್ರಿಯೆ ನಿಡಿದೆ. ಬಾಗಿಲು ತೆರೆಯುತ್ತಿದ್ದಂತೆ ಕರೆಂಟು ಸಹ ಬಂತು. ಬೆಳಕಿನ ಕಿರಣಗಳು ಅವನ ಮುಖದ ಮೇಲೆ ಬಡಿಯುತ್ತಿರುವುದರಿಂದ ಮುಖ ರಾವ್ ಹೊಡೆದಂತೆ ಕಾಣಿಸುತ್ತಿತ್ತು. ಆದರೂ ಮನ ತುಸು ನಿರಾಳವಾಯಿತು. ನನ್ನ ಭಾವನೆಗಳಿಗೆ ಸ್ಪಂದಿಸುವ ಭಾಷಿಕ ವ್ಯಕ್ತಿ ಸಿಕ್ಕಿದ್ದಾನೆಂದುಕೊಂಡೆ. ನನ್ನ ಮೆಚ್ಚಿನ ಆಹಾರ ಮೀನು, ಹಾಗಾಗಿ ಇಂದು ಮೃಷ್ಟಾನ್ನ ಭೋಜನವೆಂದು ಅರಿತು ನನ್ನ ಬಟ್ಟೆ–ಬರೆಗಳನ್ನು ಹೊದಿಸಿಕೊಳ್ಳುತ್ತಿದ್ದೆ. ಅವನು ಚಿಮಣಿಯೆಣ್ಣೆಯ ಒಲೆಯ ಮೇಲೆ ಅಡಿಗೆಗೆ ತಯಾರಿ ನಡೆಸಿದ.

'ನಾನೇನಾದ್ರೂ ಕೈಜೋಡಿಸಲೇ.....?' ಎಂದು ಕೇಳಿದೆ

'ಪರವಾಗಿಲ್ಲ ಸರ್ ಮಾಡ್ತಿನಿ' ಎಂದ ಅವನು ಕೈ–ಕಾಲು ಮುಖ ತೊಳೆದು ಇಬ್ಬರು ಮಾತಿಗೆ ಇಳಿದೆವು.

ನಾನು ನಾಗರಾಜ, ಗದಗ ಜಿಲ್ಲೆಯಿಂದ ಬಂದಿನಿ. ಇಲ್ಲೆ ಕಾರವಾರ ತಾಲೂಕಿನ ಉಳಗಾಯೆನ್ನುವ ಗ್ರಾಮದಲ್ಲಿ ಮೇಷ್ಟ್ರ ಕೆಲಸಕ್ಕೆ ಬಂದಿರುವೆ ಎಂದು ಪರಿಚಯ ಹೇಳಿಕೊಂಡು, 'ನಿಮ್ಮ ಪರಿಚಯ?' ಅಂತ ಕೇಳಿದೆ.

'ಬೇಡ.....ಬಿಡಿ ಗುರುಗಳೇ' ನನ್ನ ಪರಿಚಯ ಬೇಡ ಎಂದು ಯೋಚಿಸುತ್ತಾ ತುಟಿ ಕಡಿಯುತ್ತಾ ನಿರಾಕರಿಸಿದ,

ಬೆಳಗಿನ ಝಾವ ನಿತ್ಯಕರ್ಮ ಮುಗಿಸಿದರೂ ನಿನ್ನೆಯಂತೆ ಮಳೆರಾಯ ಮತ್ತೆ ಮುಂದುವರೆಸಿದ್ದ. ತೊಯ್ದ ಬಟ್ಟೆಯಲ್ಲೇ ಮನೆ ಹತ್ತಿರ ತುಸು ದೂರದಲ್ಲಿದ್ದ ವೃತ್ತದಲ್ಲಿ

ನಿಂತಿದ್ದೆ, 'ಬಿಡದಲ್ಲಪ್ಪಾ ಶನಿ ಕಾಟ ಮಳೆಯೆಂದು' ಸಿಟ್ಟಿಗೆದ್ದಿದ್ದೆ. ಟೆಂಪೊದತ್ತ ನೋಟ ಬಿಡುತ್ತಿರುವಾಗ ದಿನ ತುಂಬಿದ ಬಸುರಿಯಂತೆ ತುಂಬಿತುಳುಕಿ ಗುರುಗುರೆನ್ನುತ್ತ ದಡಬಡಿಸುತ್ತಾ, ಜೋಲಿ ಹಾಕುತ್ತಾ ಟೆಂಪೋ ಬಂತು. ಅದೇ ಟೆಂಪೊದಲ್ಲಿ ಆಗಲೇ ಶಾಲೆಯ ಸಮಯವೂ ಮೀರುತ್ತಿರುವುದರಿಂದ ಹೇಗೋ ಅದರಲ್ಲೇ ಸ್ಥಳಾವಕಾಶ ಮಾಡಿಕೊಂಡು ಟೆಂಪೋ ಏರಿದೆ.

ಟಿಕೇಟು ಕೇಳುವವನ ಆವಾಜ ಬಿಟ್ಟರೇ ಮತ್ಯಾರು ತುಟಿಕ್-ಪಿಟಿಕ್ ಎನ್ನಲಿಲ್ಲ, ಅದೇ ಸ್ಥಿತಿಯಲ್ಲಿ ಟೆಂಪೊ ಅವಘಡಿಸುವಂತೆ ಮೇಲೆ, ಕೆಳಗೆ, ಈ ಕಡೆ, ಆ ಕಡೆ ವಾಲುತ್ತಾ ಮುನ್ನಡೆಯುತ್ತಿತ್ತು ಊರು ತಲುಪುವ ಹೊತ್ತಿಗೆ ಮೈ-ಕೈ ಬ್ಯಾನೆಗೆ ಶರಣಾಗಿದ್ದವು. ಮಳೆಯಿಂದ ರಸ್ತೆ ಸಮವಾಗಿ ನೀರಿನ ಕಂದರವನ್ನು ನಿರ್ಮಿಸಿದ್ದರಿಂದ ಅನಿರ್ವಾಯವಾಗಿ ನಾವೆಲ್ಲಾ ಈ ಸ್ಥಿತಿಗೆ ಬರಬೇಕಾಯ್ತು ರಸ್ತೆಯಂತೆ ಟೆಂಪೊ, ಟೆಂಪೊನಂತೆ ರಸ್ತೆ ಒಂದಕ್ಕೊಂದು ತಕರಾರು ಎತ್ತುತ್ತಿರಲಿಲ್ಲ. ಡ್ರೈವರು ಅದರೊಟ್ಟಿಗೆ ಸೆರ್ಪಡೆಯಾದ ಮಳೆಯೂ ತಣ್ಣಗಾಯ್ತು. ಎರಡನೆಯ ಅವಧಿಯ ವಿರಾಮದ ಸಮಯಕ್ಕೆ ಮೈದಾನದಲ್ಲಿ ಇಳಿದೆ. ಬಟ್ಟೆ ಒದ್ದೆಯಾಗಿದ್ದವು ಇದೇನೂ ಹೊಸದಲ್ಲಂತ ಆವರಣದಲ್ಲಿದ್ದವರು ಸುಮ್ಮನೆ ನೋಡುತ್ತಿದ್ದರು. ಮೊದಲೇ ನನ್ನ ಪರಿಚಯ ನೀಡಿರಬಹುದು. ಹಾಗಾಗಿ ಎಲ್ಲರೂ ತದೇಕಚಿತ್ತದಿಂದ ಪಿಳಿ ಪಿಳಿ ಕಣ್ಣು ಬಿಡುತ್ತಾ ನೋಡುತ್ತಿದ್ದರು. ಮುಖ್ಯೋಪಾಧ್ಯಾಯರ ಕೊಠಡಿ ಹತ್ತಿರ ಧಾವಿಸುತ್ತಿದ್ದಂತೆ ಮಕ್ಕಳೆಲ್ಲಾ ಸುತ್ತುವರೆದರು. ಅದರಲ್ಲೊಬ್ಬ 'ಈಗ ಬಂತು ನೊಡು' ಅಂತ ಉಸಿರು ಹಾಕಿದ. ನಾನು ಅಲ್ಲೇ ಯಾವುದಾದರೂ ದನಕರು ಹಸಿರಾದ ಹುಲ್ಲನ್ನು ಮೇಯಲು ಬಂದಿರ್ಬುಹುದಂತ ತಲೆಗೆ ಹಚ್ಚಿಕೊಳ್ಳದೇ ಒಳ ನಡೆದೆ. ಅಲ್ಲಿಯೂ ಅದೇ ಉದ್ಘಾರ 'ಇದಾ...ಹಾ...ಈಗ ಬಂತು' ಅಂತ. ಹಿಂತಿರುಗಿ ನೋಡಿದೆ. ಅವರು ನನಗೇನೇ ಹೇಳುತ್ತಿರುವುದು ಖಾತ್ರಿಯಾಯ್ತು. ಆದರೆ ಗದ್ದಲದಾಗ ಯಾರು ಅಂತ ಗುರುತು ಹಿಡಿಯಲು ಸೋತೆ. 'ಈಗ ಬಂದ್ರ್ಯಾ' ಅಂತ ಗುರುಗಳೊಬ್ಬರು ಬಯಲು ಸೀಮೆಯ ಕಡೆ ಒಡನಾಟ ಬಲ್ಲವರು ನುಡಿದರು.

'ಅಭಿ ಆಯೆ ಹೊ.. ಬೈಟೋ ಔರ್ ತೋಡಾ ಆರಾಮ ಲೇಲೊ' ಅಂತ ಸ್ವಾಗತಿಸಿದರು. ರಾಷ್ಟ್ರಭಾಷಾ ಪ್ರವೀಣರು ಮತ್ತು ಶಾಲೆಯ ಮುಖ್ಯಸ್ಥರು ಇವರೆಲ್ಲರೂ ಪ್ರಯೋಗಿಸಿದ ಭಾಷೆ ನೋಡಿದರೆ ಅಯ್ಯೋ...! ನನ್ನ ಕನ್ನಡ ಉಳಿಯುತ್ತದೆಯೋ ಅಥವಾ ನನ್ನ ತಲೆಯಿಂದ ಹಾರಿ ಹೊಗುತ್ತದೆಯೋ ಅಂತ ದಿಗಿಲಾಗಿ ಅರ್ಧಂಬರ್ಧ ಬಲ್ಲ ಕನ್ನಡ ಭಾಷೆಯೊಳಗೇನೇ ಪರಿಚಯವಾಯ್ತು. ಸಿಬ್ಬಂದಿಗಳೆಲ್ಲಾ ತಮ್ಮತಮ್ಮ ಸ್ಥಳದಲ್ಲಿ ಆಸೀನರಾದರು. ಅಷ್ಟರಲ್ಲಿ ಘಂಟೆಯ ನಾದ ಮೊಳಗಿತು. ವಿದ್ಯಾರ್ಥಿಗಳೆಲ್ಲಾ ತಮ್ಮತಮ್ಮ ವರ್ಗದ ಕೋಣೆಗೆ ಹೋದರು.

'ಸರ್ ನಿಂದು ಕ್ಲಾಸಿದೆ ಈಗ ಹೋಗು' ಅಂತ 10 ನೇ ತರಗತಿಗೆ ಪರಿಚಯ ಮಾಡಿಸಲು ಪಿ.ಟಿ ಮಾಷ್ಟರು ಮುನ್ನಡೆದರು. ನಾನು ಅವರ ಹಿಂದೆ ಅಡಿಯಿಟ್ಟೆ.

'ಮಕ್ಕಳೆಲ್ಲಾ ಗುಡ್‌ಆಫ್ಟರ್‌ನೂನ್ ಸರ್' ಅಂತ ಯಾವ ಅಕ್ಷರವನ್ನೂ ನುಂಗದೆ ಆಂಗ್ಲದಲ್ಲಿ ಉಚ್ಚರಿಸಿದರು.

'ಎಸ್ ಸೀಡಾವನ್' ಪೀ..ಪೀ..ಊದಿ, ಈ ಪಿ.ಪಿ ಇನ್ನು ಮುಂದೆ ಮೈದಾನದಲ್ಲಿ ಫಿಕ್ಸ್ ಅಂತ ನನ್ನ ಪರಿಚಯ ಪ್ರಾರಂಭಿಸಿದರು.

'ಈವಾ ನಾಗರಾಜ ಹಾಂವ್ ಮೂಕಾರ ಕ್ಲಾಸ್ ಗೇನಾ, ಚಲ್ಯಾಕ ಗೇವತಾ' ಅಂತ ನಿಟ್ಟುಸಿರಿನ ದಾಟಿಯಲ್ಲಿ ಹೇಳಿ ಹೋದರು ನನ್ನಪ್ಪನಾಣೆಗೂ ಏನು ಹೇಳಿದ್ರಂತೂ ಗೊತ್ತಾಗಲಿಲ್ಲ ಹಾ....ಹಾಂವ್ ಎನ್ನುವ ಶಬ್ದ ಮತ್ತೆ ಮೊಳಗಿತು. ಕೆಲವು ದಿನಗಳಾದ ಮೇಲೆ ಅರ್ಥವಾಗಿದ್ದೇನೆಂದರೆ 'ಇವ್ ನಾಗರಾಜ ಅಂತ ಇನ್ನು ಮುಂದೆ ನಾನ್ ಖಾಯಂ ಆಗಿ ಮೈದಾನದಲ್ಲೇ ಪಿ.ಪಿ ಊದೊದು. ಕನ್ನಡ ಕ್ಲಾಸನ್ನು ಈ ಹುಡುಗ ತಗೊಂತಾನೆ ಅಂತ' ಇದನ್ನು ನೆನೆಸಿಕೊಂಡು ಆಗಾಗ ನಾನು ನಗ್ತಿದ್ದೆ. ಈ ವಾಕ್ಯ ಮೊದಲ ಬಾರಿಗೆ ಕೇಳಿದಾಗ ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದೆ. ಆ ದಿನದ ಪೇಚಾಟ ಬೇಡ. ಛೇ...ಛೇ....ಹೀಗೆ ಇದ್ರೇ ಕನ್ನಡ ಭಾಷೆ ಗೋವಿಂದಾ.....ಗೋವಿಂದಾ ಹಾಗಂತ ನಾನು ಕನ್ನಡ ಭಾಷೆಯನ್ನು ಸಾಯಿಸಲಿಲ್ಲ ಆ ಶಾಲೆಯ ಮಕ್ಕಳಿಂದ ಶಿಕ್ಷಕರಿಂದ ಕೆಲವೇ ವರ್ಷದಲ್ಲಿ ಕನ್ನಡಮಯವನ್ನಾಗಿಸಿದೆ.

ವಿದ್ಯಾರ್ಥಿಗಳನ್ನುದ್ದೇಶಿಸಿ, 'ನೀವೆಲ್ಲಾ ಕ್ಷೇಮವೇ' ಅಂದಾಗ ಅರ್ಥವಾಗದೇ ಮುಖ ನೋಡ್ತಾ ಬೆಪ್ಪಗಾದ್ರೂ ಅದ್ರೊಬ್ಬ ಧೈರ್ಯ ಪಡೆದು 'ನೀನ್ ಹೆಂಗೆ ಇದಿ ಸರ್' ಅಂದ. ಅವ್ನ ಮಾತಿಗೆ ಹಣೆ ಬಡಿದುಕೊಳ್ಳುತ್ತಾ ತಡೆಯಲಾರದ ಮುಗುಳ್ನಗೆಯಲ್ಲೇ ಕೈ ಸನ್ನೆಯಲ್ಲೇ ಆರಾಮ ಇರುವಂತೆ ತೋರಿಸಿದೆ.

ಪಾಠ, ಪ್ರವಚನ, ಪಠ್ಯಕ್ರಮ ಇತ್ಯಾದಿ ವಿಚಾರಿಸಿದ ಮೇಲೆ ಅವರನ್ನ ಸಂಭೋದಿಸಿ

'ಲಕ್ಷ್ಯ ಕೊಡ್ರೀ' ಅನ್ನೊದ್ರೊಳ್ಗ ಎಲ್ಲರೂ ಗೊಳ್ ಅಂತ ನಕ್ಕರು. ನಾನು ಒಂದು ಕ್ಷಣ ಕಕ್ಕಾಬಿಕ್ಕಿಯಾದೆ.

'ಲಕ್ಷ್ಯ ಇಲ್ಲಾ ಎಲ್ಲಿಂದ ತರೋದು' ಅಂದರು. ಓ..ಹೋ..ಆವಾಗ ಎಚ್ಚ್ರವಾಯ್ತು. ಬಾರಿ ಕಿಲಾಡಿಗಳಪ್ಪಾ ನೀವೆಲ್ಲಾ ಅಂದೆ. ನಂತರ ಅವರನ್ನು ಮಾತುಗಾರಿಕೆಗೆ ಹಚ್ಚಿದಾಗ ಬೇಡ ಆ ಪಜೀತಿ.

'ಹಾವು' ಸ್ಥಳದಲ್ಲಿ 'ಆವು' ಹೀಗೆ 'ಹ' ಮತ್ತು 'ಆ' ಉಚ್ಚರಿಸಿ ಮಾತನಾಡುವುದು

'ಬೇಗ' ಬದಲಾಯಿಸಿ 'ಬೇಗಿ' 'ತಿಂದ್ಯಾ' ಬದಲಾಗಿ 'ತಿಂಬ್ಯಾ' 'ತಿಂಬೊಕೆ' 'ಏನು' ಬದಲಾಗಿ 'ಎಂತ'

ಇಂತಹ ಅನೇಕ ದೋಷಗಳ ಉಚ್ಚಾರಣೆಯಿಂದ ಇನ್ನೊಂದಿಷ್ಟು ದಿನ ಇಲ್ಲಿದ್ದರೆ ನನ್ನಲ್ಲಿರುವ ಹೊಂದಾಣಿಕೆಯ ಕನ್ನಡ ಹೋಗಿ ಕೊಂಕಣಿ ಮಿಶ್ರಿತ 'ಶುದ್ಧ' ಕನ್ನಡವಾಗುತ್ತದೆಯೆಂದು ಮನದಲ್ಲೇ ಅಂದುಕೊಳ್ಳುತ್ತಿರುವಾಗ 8 ನೇ ತರಗತಿಯ ಹುಡುಗನೊಬ್ಬ ಬಾಗಿಲ ಹತ್ತಿರ ಬಂದು

'ಸರ್' ಎಂದನು

'ಏನು'...? ಅಂದೆ

'ಅದು ನಿನಗೆ ಕರೀತಿದೆ' ಅಂದನು. " ಮೈದಾನದಲ್ಲಿ ಹಸು ಮೇಯುತ್ತಿರಬಹುದು, ಅದಕ್ಕ ಹುಲ್ಲು ಕಡ್ಮಿಯಾಯ್ತೇನೋ....? ಹೋಗಿ ಹಾಕು ಅಂದೆ. ನಂತರ ಎಲ್ಲೋ ಏನೂ ಕಾಣಿಸುತ್ತಿಲ್ಲ ಅಂತ ಕೇಳಿದೆ.

ಕಛೇರಿ ಕಡೆ ಕೈ ತೋರಿಸಿ 'ಅದು...ಅಲ್ಲಿ' ಅಂದ

ಓಹೋ ಅಂತ ಅರಿವಾಗಿ ಕಛೇರಿ ಕಡೆ ಹೊದೆ

‘ಶಾಲಾ ಮೇ ಹಾಜಿರ ಹೂವೆ ಕರಕೆ ಏಕ ಪತ್ರ ಲೀಕಕರ ದೇ..ದೋ..’ ಅಂತ ಹಾಳೆ ಕೊಟ್ಟು ಮುಖ್ಯಸ್ಥರು ನನ್ನಿಂದ ಹಾಜರಾದ ಪತ್ರ ಬರೆಯಿಸಿಕೊಂಡರು. ಅಷ್ಟರಲ್ಲಿ ಮಧ್ಯಾನ್ಹದ ಊಟದ ಸಮಯವೂ ಆಯ್ತು ಎಲ್ಲರು ‘ಅನ್ನಪೂರ್ಣೇಶ್ವರಿ’ ಕೊಠಡಿಗೆ ಧಾವಿಸಿ ಬಿಸಿಯೂಟ ಸವಿದೆವು. ಮತ್ತೆ ಇನ್ನುಳಿದ ವರ್ಗಕೋಣೆಗೆ ಹೊದರೆ ಅಲ್ಲಿಯೂ ಅದೇ ಹಣೆಬರಹ. ಏನ್ ಮಾಡೋದು ಸಿಡಿಮಿಡಿಗೊಳ್ಳುವಂತಿಲ್ಲ. ಅಂತೂ ಆ ದಿನದ ಸೇವೆ ಮುಗಿಸಿ ಸಾಯಂಕಾಲ ಟೆಂಪೊ ಹತ್ತಿದರೆ ಈಗಂತೂ ಮಕ್ಕಳಿಂದಲೇ ತುಂಬಿಹೋಗಿತ್ತು. ಎಲ್ಲಾ ಮಕ್ಕಳ ನೋಟ ನನ್ನ ಮೇಲೆನೇ..! ಅವ್ರಲ್ಲೇ ಗುಸು–ಪುಸು ನಗ್ತಿದ್ರೂ ನಾನೇನ ಅವ್ರ ಉಸಾಬರಿಗೆ ಹೋಗ್ಲಿಲ್ಲ.

ಹೀಗೆ ನನ್ನ ಸೇವೆ ಅವರೊಂದಿಗೆ ಹೊಂದಾಣಿಕೆ ಮಾಡ್ಕೊಂಡು ಒಂದಿಷ್ಟು ಕನ್ನಡಮಯ ಮಾಡಲು ವಿದ್ಯಾರ್ಥಿಗಳೊಂದಿಗೆ ಶತಪಥಗೊಂಡು ಇರುವಷ್ಟು ದಿನ ಕನ್ನಡದ ಕಂಪನ್ನು ಹರಿಸೋಣವೆಂದು ಪಣ ತೊಟ್ಟೆ.

■

**ಆನ್‌ಲೈನ್ ಶಿಕ್ಷಣ: ಮಕ್ಕಳ ಬ್ರೌಸಿಂಗ್ ಹಿಸ್ಟರಿ ನೋಡಿ ದಂಗಾಗುತ್ತಿರುವ ಪಾಲಕರು – ಸುದ್ದಿ**



**ರ್ರೀ...ಫ್ಯೂಚರ್ ಬಗ್ಗೆ ಯೋಚಿಸ್ತಿದ್ವಿ...**
**ಆದ್ರೆ ಈಗ ಮಕ್ಕಳ ‘ಬ್ರೌಸಿಂಗ್ ಹಿಸ್ಟರಿ’**
**ಬಗ್ಗೆ ಕೂಡಾ ಯೋಚಿಸೋ ಹಾಗಾಗಿದೆಯಲ್ರೀ...**

# ದೇವರಪೂಜೆ ಮತ್ತು ನನ್ನ ಕಸದಡಬ್ಬ

**। ರಘುನಂದನ**

ಪ್ರತಿದಿನ ಬೆಳಗ್ಗೆ ಸ್ನಾನಮಾಡಿದ ನಂತರ ದೇವರ ಮುಂದೆ ದೀಪಹಚ್ಚಿ, ನಮ್ಮ ಆವರಣದಲ್ಲಿ ಬೆಳೆದ ಹೂವೋ, ತುಳಸಿಯೋ ಬಿಡಿಸಿ ತಂದು ದೇವರ ಮುಂದಿಟ್ಟು, ಎರಡು ಸ್ತೋತ್ರ ಹೇಳಿ ಅಡ್ಡ ಬೀಳುವುದು ಅನೇಕ ದಶಕಗಳಿಂದ ಬಂದ ಅಭ್ಯಾಸ. ಈ ಅಭ್ಯಾಸ ಯಾವಾಗ ಸುರುವಾಯಿತೋ ನೆನಪಿಲ್ಲ. ಬಹಳ ಸಣ್ಣ ವಯಸ್ಸಿನಲ್ಲೇ ನಮ್ಮಮ್ಮ ಅಭ್ಯಾಸ ಮಾಡಿಸಿರಬೇಕು. ಇವನ್ನೆಲ್ಲಾ ಮತ್ಯಾರುತಾನೆ ಹೇಳಿ ಮಾಡಿಸುತ್ತಾರೆ ? ಈಗ ಅಮ್ಮ ಇಲ್ಲ. ಆದರೆ ಅಭ್ಯಾಸ ಉಳಿದಿದೆ.

ವಾರಕ್ಕೊಮ್ಮೆಯೋ ಎರಡುಬಾರಿಯೋ ಇದು ಕೊಂಚ ವಿಸ್ತಾರಗೊಂಡು 'ಪೂಜೆ' ಎನಿಸಿಕೊಳ್ಳುವುದುಂಟು. "ಕಂಚು ಹಿತ್ತಾಳೆಯ ಪ್ರತಿಮೆಯನೆರಹಿ, ಮಿಂಚಲೆನುತೆ ಬಲು ಜ್ಯೋತಿಗಳನೆ ಹಚ್ಚಿ" ಮಾಡುವ ಘನಪೂಜೆಯೇನಲ್ಲ. ಸರಳವಾದ ಪೂಜೆಯೇ. ಆದರೂ ಅದು ಸುಮಾರು ಅರ್ಧ– ಮುಕ್ಕಾಲು ಘಂಟೆಯ ಕಾರ್ಯಕ್ರಮವಾಗುತ್ತದೆ. ಪೂಜೆಯೆಂದು ಹೆಸರಿಟ್ಟಮೇಲೆ ಅದರಲ್ಲಿ ಅಭಿಷೇಕ, ಅರ್ಚನೆ, ನೈವೇದ್ಯ ಮುಂತಾದುವು ಸೇರಿಕೊಳ್ಳುತ್ತವೆ. ಮತ್ತು, ಇವೆಲ್ಲವೂ ಸರಾಗವಾಗಿ ನೆರವೇರಬೇಕಾದರೆ ಅದಕ್ಕೆ ಬೇಕಾದ ಪರಿಕರ, ಪದಾರ್ಥಗಳನ್ನು ಪೂಜೆ ಪ್ರಾರಂಭಿಸುವ ಮೊದಲು ಹೊಂದಿಸಿ ಇಟ್ಟುಕೊಳ್ಳಬೇಕಾಗುತ್ತದೆ.

ಬಹುಮಟ್ಟಿಗೆ ಪೂಜೆಯ ಕ್ರಮ ಹಾಗೂ ಅದಕ್ಕೆ ಬೇಕಾದ ತಯಾರಿ ಅಭ್ಯಾಸವಾಗಿದೆಯಾದರೂ ಒಮ್ಮೊಮ್ಮೆ ಏನನ್ನಾದರೂ ಮರೆಯುವುದು, ಅಥವಾ ಕ್ರಮದಲ್ಲಿ ತಪ್ಪಾಗುವುದು ಉಂಟು. ಅದನ್ನು ನಿವಾರಿಸಿಕೊಳ್ಳಲೆಂದು ನಾನು ಸಂಕ್ಷಿಪ್ತವಾಗಿ ಪೂಜೆಯಕ್ರಮ ಹಾಗೂ ಅದಕ್ಕೆ ಬೇಕಾದ ಪದಾರ್ಥ, ಪರಿಕರಗಳನ್ನು ಒಂದು ಪಟ್ಟಿಯಂತೆ ಬರೆದು ಪೂಜೆಗೆ ಕೂಡುವ ಜಾಗದಲ್ಲಿ ಗೋಡೆಗೆ ನೇತುಹಾಕಿದ್ದೇನೆ. ನಾನು ಸಾಮಾನ್ಯವಾಗಿ ಮರೆಯುತ್ತಿದ್ದ ಮೂರು ವಿಷಯಗಳನ್ನು ಪಟ್ಟಿಯ ತಲೆಭಾಗದಲ್ಲಿ, ಕೆಂಪುಶಾಯಿಯಲ್ಲಿ ಬರೆದಿದ್ದೇನೆ. "ಮಂಗಳಾರತಿಗೆ – ನೆನಸಿದ ಬತ್ತಿ, ತೀರ್ಥಕ್ಕೆ – ಕೇಸರಿ, ಕರ್ಪೂರ, ಮತ್ತು ನೈವೇದ್ಯಕ್ಕೆ ಪದಾರ್ಥ". ಇದರಲ್ಲಿ ವಿಶೇಷ ಏನೂ ಇಲ್ಲ. ಅವಶ್ಯಕವಾಗಿ ಬೇಕಾದ ವಿಷಯಗಳನ್ನು ಮರೆಯಬಾರದೆಂದು ಅನೇಕರು ಈ ರೀತಿ ಪಟ್ಟಿಗಳನ್ನು ಬರೆದು ಇಟ್ಟಿರುತ್ತಾರೆ. ಇದು ನನ್ನ ಪೂಜೆಯ ಪಟ್ಟಿಯ ಕಥೆ.

ಇನ್ನು ಕಸದ ಡಬ್ಬಕ್ಕೆ ಬರೋಣ. ನನಗೆ ಬುದ್ಧಿ ತಿಳಿದ ಕಾಲದಿಂದ, ನಾವಿದ್ದ ಮನೆಯ ಸಮೀಪ ಮುನಿಸಿಪಾಲಿಟಿಯ ಕಸದ ತೊಟ್ಟಿಯಿದ್ದ ನೆನಪಿದೆ. ದಿನವೆಲ್ಲಾ ಕೂಡಿಸಿಟ್ಟ ತಾಜ್ಯಪದಾರ್ಥಗಳನ್ನು ಮರುದಿನ ಮುಂಜಾನೆ ಸಮೀಪದ ಕಸದ ತೊಟ್ಟಿಗೆ ಸುರಿದು ಬರುತ್ತಿದ್ದೆವು. ಎರಡುದಿನಕ್ಕೊಮ್ಮೆ ಮುನಿಸಿಪಾಲಿಟಿ ಲಾರಿ ಬಂದು ತೊಟ್ಟಿಯನ್ನು ಖಾಲಿಮಾಡಿ ಕಸವನ್ನು ಕೊಂಡೊಯ್ಯುತ್ತಿತ್ತು. ಒಮ್ಮೊಮ್ಮೆ ಅನೇಕ ದಿನಗಳಾದರೂ ಲಾರಿ ಬರುತ್ತಿದ್ದಿಲ್ಲ. ತೊಟ್ಟಿ ತುಂಬಿಕೊಂಡು ಕಸ ಹೊರಸುರಿದು ರಸ್ತೆಯಮೇಲೆ ಹರಡಿರುತ್ತಿತ್ತು. ನಂತರ ಯಾವಾಗಲೋ ಲಾರಿಬಂದು ಸುತ್ತ ಬಿದ್ದಿದ್ದ ಕಸ, ತೊಟ್ಟಿಯೊಳಗಣ ಕಸ ಎಲ್ಲವನ್ನೂ ಹೊತ್ತೊಯ್ಯುತ್ತಿತ್ತು.

ನನ್ನ ಜೀವನದ ಅರ್ಧ ಶತಮಾನ ಹೀಗೆ ಕಳೆದಿದ್ದಾಗ, ನಮ್ಮ ಪ್ರಧಾನ ಮಂತ್ರಿಗಳು ದೇಶವನ್ನು ಸ್ವಚ್ಛಗೊಳಿಸುವ ಘೋಷಣೆ ಮಾಡಿದರು. ಸುರಿದು ಬಿದ್ದಿರುತ್ತಿದ್ದ ಕಸದಕಡೆ ಜನರ ಗಮನ ಹರಿದು, ಬದಲಾವಣೆಗಳಾಗಿ, ಮನೆಗಳಲ್ಲಿ ಸಂಗ್ರಹವಾದ ಕಸವನ್ನು ಮನೆ ಬಾಗಿಲಿನಿಂದ ಕೊಂಡೊಯ್ಯುವ ವ್ಯವಸ್ಥೆ ಶುರುವಾಯಿತು. ಪ್ರಧಾನ ಮಂತ್ರಿಗಳೇನೋ ಪಾಪ ಜನರಿಗೂ ದೇಶ ಸ್ವಚ್ಛವಾಗಿರುವುದು ಇಷ್ಟವಾದೀತೇನೋ ಎಂದುಕೊಂಡು ದೇಶವನ್ನು ಶುಚಿಗೊಳಿಸುವ ಘೋಷಣೆ ಮಾಡಿಬಿಟ್ಟರು. ಆದರೆ ಬಹುತೇಕ ಜನರಿಗೆ ಸುತ್ತಲೂ ಕಸ ಕೊಳಚೆ ಹರಡಿಕೊಂಡಿರುವುದೇ ಮುದವೆನಿಸುತ್ತದೇನೋ! ಅವರು ಕಸದ ಜವಾಬ್ದಾರಿಯನ್ನು ಪ್ರಧಾನಿಗಳಿಗೆ ಬಿಟ್ಟು ತಾವು ಆ ಬಗ್ಗೆ ತಲೆ ಕೆಡಿಸಿಕೊಳ್ಳದೆ ತಮ್ಮ ಪಾಡಿಗೆ ಸುತ್ತ ಮುತ್ತ ಕಸ ಚೆಲ್ಲಾಡಿಕೊಂಡು ಸಂತೋಷವಾಗಿದ್ದಾರೆ !

ಅದೇನೇ ಇರಲಿ. ನನ್ನ ಕಸದ ಡಬ್ಬಕ್ಕೆ ಬರುತ್ತೇನೆ. ಸಾಮಾನ್ಯವಾಗಿ ನಾನು ಪೂಜೆ ಮುಗಿಸಿದ ಕೊಂಚ ಹೊತ್ತಿನಮೇಲೆ ನಮ್ಮ ಮನೆಗಳಿಂದ ತಾಜ್ಯವಸ್ತುಗಳನ್ನು ಕೊಂಡೊಯ್ಯುವ ಮುನಿಸಿಪಾಲಿಟಿಯ ಆಳು ಮನೆಯಮುಂದೆ ಬಂದು ಸೀಟಿ ಊದುತ್ತಿದ್ದ. ನಾವು ಎರಡುಮೂರುದಿನದಿಂದ ಕೂಡಿಟ್ಟಿರುತ್ತಿದ್ದ ತಾಜ್ಯಪದಾರ್ಥಗಳ ಡಬ್ಬಗಳನ್ನು ಆ ಹೊತ್ತಿಗೆ ಮನೆಯ ಮುಂದೆ ಇಟ್ಟಿರಬೇಕಾದದ್ದು ನಮ್ಮ ಜವಾಬ್ದಾರಿ. ಅವನು ಬರುವ ಹೊತ್ತಿಗೆ ಡಬ್ಬ ಇಲ್ಲದಿದ್ದರೆ ಅವನು ಮುಂದೆ ಹೊರಟುಬಿಡುತ್ತಿದ್ದ. ಕಸತುಂಬಿದ ಡಬ್ಬ ಹಾಗೆಯೇ ಉಳಿಯುತ್ತಿತ್ತು. ಆದ್ದರಿಂದ ನನಗೆ ಪೂಜೆಮುಗಿಸಿದ ತಕ್ಷಣದ ಕೆಲಸವೆಂದರೆ ಕಸದ ಡಬ್ಬಗಳನ್ನು ಹೊರಗಿಡುವುದು. ಈ ಎರಡೂ ಕೆಲಸಗಳನ್ನು ನಾನು ಸಾಂಗವಾಗಿ ಮಾಡುತ್ತಾ ಬಂದಿದ್ದೆ.

ಮುನಿಸಿಪಾಲಿಟಿ ವ್ಯವಸ್ಥೆ ಬದಲಾಯಿತೋ, ಕಸ ಒಯ್ಯುವ ಮನುಷ್ಯನ ವೇಳೆ ಹೆಚ್ಚುಕಮ್ಮಿಯಾಯಿತೋ ತಿಳಿಯದು. ಕಸ ಒಯ್ಯುವ ಸಮಯ ಬದಲಾಯಿತು. ಒಂದುಬಾರಿ ನನ್ನ ಮಂಗಳಾರತಿಯ ಸಮಯದಲ್ಲಿ ಹೊರಗಿನಿಂದ ಕಸದವನ ಸೀಟಿ ಕೇಳಿಸಿತು. 'ರಿಫ್ಲೆಕ್ಸ್ ಆಕ್ಷನ್' ಎನ್ನುತ್ತಾರಲ್ಲ, ಆ ರೀತಿ, ತಕ್ಷಣ ಮಂಗಳಾರತಿಯ ತಟ್ಟೆಯನ್ನು ನೆಲಕ್ಕೆ ಕುಕ್ಕಿ ಕಸದಡಬ್ಬ ಹೊರಗಿಡಲು ಓಡಿದ್ದೆ ! ದೇವರು ಎಲ್ಲ ತಿಳಿದವನೂ, ದಯಾಮಯನೂ ಆದ್ದರಿಂದ ಬಹುಶಃ ಅವನು ನನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ನನ್ನಿಂದಾದ ಅಪಚಾರವನ್ನು ಕ್ಷಮಿಸಿರಬಹುದು ! ಆದರೆ ಆ ರೀತಿಯ ಅಪಚಾರವಾಗುವುದು ನನ್ನ ಮನಸ್ಸಿಗೆ ಹಿಡಿಸಲಿಲ್ಲವಾದ್ದರಿಂದ ಪೂಜೆ ಮಾಡುವ ದಿನಗಳಲ್ಲಿ, ಪೂಜೆಗೆಂದು ಕೂಡುವ ಮುಂಚೆಯೇ ಕಸದ ಡಬ್ಬಗಳನ್ನು ಹೊರಗಿಡುವ ಅಭ್ಯಾಸ ಮಾಡಿಕೊಂಡೆ.

ಆದರೂ ಒಂದೊಂದು ದಿನ ಆ ಕೆಲಸ ಮರೆತು ಹೋಗಿ ಪೂಜೆಯ ಮಧ್ಯದಲ್ಲಿ ಕಸದವನ ಸೀಟಿ ಕೇಳುತ್ತಿತ್ತು. ಪೂಜೆ ಬಿಟ್ಟು ಏಳುವುದೋ ಅಥವಾ ಮತ್ತೆರಡುದಿನ ಕಸವನ್ನು ಮನೆಯಲ್ಲಿ ಉಳಿಸಿಕೊಳ್ಳುವುದೋ ಎಂಬ ದ್ವಂದ್ವ ಉಂಟಾಗುತ್ತಿತ್ತು. ಒಮ್ಮೆ, ಈ ದ್ವಂದ್ವದ ಕಿತ್ತಾಟದಲ್ಲಿ ಕಸದ ಡಬ್ಬವೇ ಗೆದ್ದು, ಪೂಜೆಬಿಟ್ಟು ಡಬ್ಬ ಹಿಡಿದು ಹೊರಗೋಡಿದರೂ, ಅದು ತಡವಾಗಿ, ಕಸದವನು ಮುಂದೆ ಹೊರಟು ಹೋಗಿದ್ದ. ನನ್ನ ಪರಿಸ್ಥಿತಿ ಇದೂ ಕೆಟ್ಟಿತು, ಅದೂ ಕೆಟ್ಟಿತು ಎಂಬಂತಾಗಿತ್ತು. ಕೆಲವು ಬಾರಿ ಈ ರೀತಿ ತೊಂದರೆ ಆದಮೇಲೆ ಅದನ್ನು ತಪ್ಪಿಸುವ ಉಪಾಯ ಹೊಳೆಯಿತು. ನನ್ನ ಪೂಜಾಕ್ರಮದ ಪಟ್ಟಿಯ ತಲೆಭಾಗದಲ್ಲಿ, ಮಂಗಳಾರತಿ, ತೀರ್ಥ, ನೈವೇದ್ಯದ ಜತೆಗೆ

ಕೆಂಪುಶಾಯಿಯಲ್ಲಿ "ಕಸದ ಡಬ್ಬ" ಎಂದು ಬರೆದಿಟ್ಟೆ. ಕಸದ ಡಬ್ಬದ ತೊಂದರೆ ನಿವಾರಣೆಯಾಗಿ ಪೂಜೆ ಸರಾಗವಾಯಿತು.

ಮೊನ್ನೆ ಅದೇಕೋ ನನ್ನ ಪತ್ನಿಯ ಗಮನ ನನ್ನ ಪೂಜಾ ಕ್ರಮದ ಪಟ್ಟಿಯೆಡೆಗೆ ಹೋಯಿತು. ಬಹುಶಃ ನನ್ನ ಪಟ್ಟಿಯ ಜತೆಯಲ್ಲಿ ಗೋಡೆಯ ಮೇಲೆ ನೇತಾಡುತ್ತಿದ್ದ ಪಂಚಾಂಗವನ್ನು ತೆಗೆದುಕೊಳ್ಳಲು ಹೋಗಿರಬೇಕು. "ಏನ್ರೀ ಇದು ? ನಿಮ್ಮ ಪೂಜೆಯ ಪಟ್ಟಿಯಲ್ಲಿ ಕಸದ ಡಬ್ಬ ಏಕೆ ಬಂತು?" ಎಂಬ ಪ್ರಶ್ನೆಗೆ ಉತ್ತರವಾಗಿ ಮೇಲೆ ಬರೆದಿರುವುದನ್ನು ವಿವರಿಸಿದೆ. "ಅದೇನು ವಿಚಿತ್ರದ ಮನುಷ್ಯರೋ! ಎಲ್ಲದರಲ್ಲೂ ನಿಮ್ಮದೇ ಒಂದು ಎಡವಟ್ಟು ರೀತಿ. ನೋಡಿದವರು ಯಾರಾದರೂ ಏನು ತಿಳಿದಾರು? ಹಾಗೇಕೆ ಬರೆದಿದ್ದೀರಿ ಎಂಬುದನ್ನೂ ಬರೆದಿಡಿ. ಇಲ್ಲದಿದ್ದರೆ ನಿಮ್ಮ ಮುಂದಿನ ಪೀಳಿಗೆಗೆ, ನಿಮ್ಮ ಕಸದ ಡಬ್ಬ, ಯಜ್ಞಕ್ಕೆ ಕಟ್ಟುವ ಕರಿಯ ಬೆಕ್ಕಾದೀತು" ಎಂಬ ಟೀಕೆ ಬಂದಿತು.

ಯಾರೋ ಯಜ್ಞಮಾಡುವವರು ಯಜ್ಞಕ್ಕೆ ಮುಂಚೆ ಕಂಬಕ್ಕೆ ಕಟ್ಟುತ್ತಿದ್ದ ಬೆಕ್ಕಿನ ಕಥೆ ಗೊತ್ತಲ್ಲವೇ? ನಿತ್ಯ ಯಜ್ಞಕಾರ್ಯ ಮಾಡುತ್ತಿದ್ದ ಗುರು ಒಬ್ಬನ ಬಳಿ ಒಂದು ಕರಿಯ ಬೆಕ್ಕಿತ್ತಂತೆ. ಅದೇಕೋ ಅದರ ಮೇಲೆ ಅವನಿಗೆ ಅತಿ ಪ್ರೀತಿ. ಅವನು ಯಜ್ಞಮಾಡುವಾಗ ಕೂಡ ಅದು ಅವನ ಸುತ್ತಮುತ್ತ ಸುಳಿದಾಡಿಕೊಂಡಿದ್ದು, ಯಾವುದೋ ಕ್ಷಣದಲ್ಲಿ ಮೈಮೇಲೆ ಏರುವುದು, ಪದಾರ್ಥಗಳನ್ನು ಬೀಳಿಸುವುದು ಮುಂತಾಗಿ ತಂಟೆ ಮಾಡುತ್ತಿತ್ತಂತೆ. ಅವನಿಗೆ ಅದನ್ನು ದಂಡಿಸಿ ಬುದ್ಧಿಕಲಿಸುವ ಮನಸ್ಸಿರಲಿಲ್ಲ. ಆದ್ದರಿಂದ ತಾನು ಯಜ್ಞಕ್ಕೆ ತೊಡಗುವ ಮುನ್ನ ಅದನ್ನು ಬದಿಯಲ್ಲಿ ಒಂದು ಕಂಬಕ್ಕೆ ಕಟ್ಟಿಹಾಕಬೇಕೆಂದು ಶಿಷ್ಯರಿಗೆ ಸೂಚಿಸಿದ್ದನಂತೆ. ಹಾಗಾಗಿ ಬೆಕ್ಕನ್ನು ಕಂಬಕ್ಕೆ ಕಟ್ಟುವುದು ಯಜ್ಞಕ್ಕೆ ಸಂಭಂದಪಟ್ಟ ಒಂದು ಕಾರ್ಯವಾಗಿ ಹೋಯಿತು. ಅವನ ಕಾಲದ ನಂತರ ಬಂದ ಶಿಷ್ಯರಿಗೆ ಕಾರ್ಯದ ಹಿಂದಿನ ಉದ್ದೇಶ್ಯ ತಿಳಿದಿರಲಿಲ್ಲ. ಹಾಗಾಗಿ ಮುಂದಿನ ಪೀಳಿಗೆಯ ಯಾಜ್ಞಿಕರು ಬೆಕ್ಕು ಸಾಕಿಲ್ಲದಿದ್ದರೂ ಯಜ್ಞಮಾಡುವ ಮುಂಚೆ ಪ್ರಯಾಸಪಟ್ಟು ಊರೆಲ್ಲಾ ಹುಡುಕಿ ಒಂದು ಕರಿಯ ಬೆಕ್ಕನ್ನು ತಂದು ಪಕ್ಕದಲ್ಲಿ ಕಟ್ಟಿ ಹಾಕಿಕೊಳ್ಳುತ್ತಿದ್ದರಂತೆ !

ನನ್ನ ಮುಂದಿನ ಪೀಳಿಗೆಯವರೇನಾದರೂ ಪೂಜೆ ಮಾಡುವ ಪದ್ಧತಿ ಯನ್ನು ಉಳಿಸಿಕೊಂಡು ಬಂದರೆ, ನನ್ನ ಪೂಜೆಯ ಪಟ್ಟಿಯನ್ನು ಅನುಸರಿಸಿದರೆ, ಪೂಜೆಗೆ ಮುಂಚೆ ಒಂದು ಕಸದಡಬ್ಬವನ್ನು ತಂದು ಬದಿಯಲ್ಲಿ ಇರಿಸಿಕೊಳ್ಳುತ್ತಾರೇನೋ !!

■

**ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಒಂದು ಸ್ಪರ್ಧೆ. 'ನೀವು ಮುಂದೇನಾಗುತ್ತೀರಿ?' ಎಂಬುದರ ಬಗ್ಗೆ ಬರೆಯಲು ಟೀಚರ್ ಹೇಳಿ ಎಲ್ಲರಿಗೂ ಬಿಳಿ ಹಾಳೆ ಹಂಚಿದರು. ಎಲ್ಲರೂ ಬರೆದು ಕೊಟ್ಟ ಮೇಲೆ ಟೀಚರ್ ಉತ್ತರಗಳನ್ನು ಪರಿಶೀಲಿಸಿದರು. ಮಾಮೂಲಿನಂತೆ ಇಂಜನಿಯರ್, ಪೈಲಟ್, ಲಾಯರ್, ರಾಜಕಾರಣಿ, ವೈದ್ಯ, ಆರ್ಕಿಟೆಕ್ಟ್.. ಹೀಗೆ ಮಾಮೂಲಿ ಉತ್ತರಗಳೇ ತುಂಬಿದ್ದವು.**

**ಆದರೆ ಒಬ್ಬ ಮಾತ್ರ ವಿಭಿನ್ನವಾಗಿ ಬರೆದಿದ್ದ. 'ನಾನು ಖುಷಿಯಿಂದ ಇರಲು ಬಯಸುತ್ತೇನೆ.'**

# ತಮಿಳು ಕಾಮಾಚ್ಚಿಯ ಕನ್ನಡ ಪರಸಂಗಗಳು

**। ಶ್ರವಣಕುಮಾರಿ**

ನಮ್ಮ ಕಾಮಾಕ್ಷಿ ಕಂಚಿಯಿಂದ ಬೆಂಗಳೂರಿಗೆ ಬಂದು ಮೂವತ್ತೈದು ವರ್ಷವಾದರೂ ನೆಟ್ಟಗೆ ಕನ್ನಡದಲ್ಲಿ ಮಾತಾಡಲು ಕಲಿಯದಿದ್ದುದು, ಕಲಿಸಲಾಗದ ನಮ್ಮ ಅಸಫಲತೆಯೆ? ಅವಳ ತಮಿಳು ಭಾಷಾ ಪ್ರೇಮವೆ? ಇಲ್ಲವೇ ಕನ್ನಡಮ್ಮನ ದೌರ್ಭಾಗ್ಯವೆ? ನನಗಂತೂ ನಿರ್ಧರಿಸಲು ಸಾಧ್ಯವಾಗಿಲ್ಲ. ಅವಳು ಬರೆಯುವಾಗ ತನ್ನ ಹೆಸರನ್ನು ಕಾಮಾಕ್ಷಿಯೆಂದು ಬರೆದರೂ, ಹೇಳುವುದು ಮಾತ್ರಾ ಕಾಮಾಚ್ಚಿಯೆಂದೇ. ಅವಳಿಗೆ ಕನ್ನಡವನ್ನು ಕಲಿಸಲು ಹೋದವರೆಲ್ಲಾ ಸೋತು ತಾವೇ ತಮಿಳನ್ನು ಕಲಿತು ಮಾತಾಡುವಂತೆ ಮಾಡಿದ ಅವಳ ಸಾಧನೆ ಕಮ್ಮಿಯದಲ್ಲ! ಕಲಿಯದಿರಲು ಕಾರಣ ಅವಳ ಭಾಷೆ ಕಲಿಯಲಾಗದ ಸಾಮರ್ಥ್ಯವೋ ಇಲ್ಲವೇ ?ಎಲ್ಲಿದ್ದರೇನ್, ತಮಿಳು ಭಾಷೆಯನ್ ಬಿಡೆನ್' ಎನ್ನುವ ತನ್ನ ಮಾತೃಭಾಷೆಯ ಬಗ್ಗೆ ಅವಳಿಗಿರುವ ಏಕನಿಷ್ಠೆಯೋ ಎನ್ನುವ ಗೊಂದಲ ನನ್ನನ್ನು ಹಲವಾರು ಬಾರಿ ಕಾಡಿದೆಯಾದರೂ, ಪ್ರೊ. ಬಿ.ಜಿ.ಎಲ್. ಸ್ವಾಮಿಯವರ 'ತಮಿಳು ತಲೆಗಳ ನಡುವೆ' ಓದಿದ ಮೇಲೆ ಅದು ತಮಿಳರ ಸ್ವಭಾವ ಸಹಜವಾದ ನಡತೆ ಎಂದು ಅರ್ಥಮಾಡಿಕೊಂಡಿದ್ದೇನೆ. ಹಾಗಾಗಿ ಅವಳೆಷ್ಟೇ ಅಧ್ವಾನವಾಗಿ ಕನ್ನಡ ಮಾತಾಡಿದರೂ, ನನ್ನ ಕಣ್ಣೆದುರೇ ಮಾತೃಭಾಷೆಯ ಕಗ್ಗೊಲೆಯಾಗುತ್ತಿದ್ದರೂ ತಾಯಿಯ ಕ್ಷಮೆ ಬೇಡಿ ಆ ನೋವನ್ನಾದರೂ ಸಹಿಸಿಕೊಂಡೇನು; ಆದರೆ ತಮಿಳನ್ನು ಮಾತ್ರಾ ಕಲಿಯಲೊಲ್ಲೆ ಎನ್ನುವ ಭೀಷ್ಮ ಪ್ರತಿಜ್ಞೆಯನ್ನೂ (ಅವಳಿಗೆ ಹೇಳದೆ) ನನ್ನಲ್ಲೇ ಮಾಡಿಕೊಂಡಿದ್ದೇನೆ; ಅವಳೊಂದಿಗೆ ಅಚ್ಚಗನ್ನಡದಲ್ಲೇ ಮಾತಾಡುತ್ತೇನೆ.

ಬ್ಯಾಂಕಿಗೆ ಬಂದ ಗ್ರಾಹಕರನ್ನು, ಅವರು ಯಾವುದೇ ಭಾಷೆಯಲ್ಲಿ ಮಾತನಾಡಿಸಿದರೂ ಇವಳು ಉತ್ತರಿಸುವುದು ಮಾತ್ರಾ ಮೊತ್ತಮೊದಲಿಗೆ ತಮಿಳಿನಲ್ಲಿ. ಅವರ ಮುಖಭಾವದಿಂದ ಅವರಿಗೆ ಅರ್ಥವಾಗಲಿಲ್ಲವೆನ್ನುವುದು ತಿಳಿದಾಗ ('ಬೆಂಗಳೂರಿನಲ್ಲಿ ಯಾರಿಗೆ ತಮಿಳು ಅರ್ಥವಾಗುವುದಿಲ್ಲ?'ಎನ್ನುವುದು ಅವಳ ಧೋರಣೆಯೇನೋ. ಆದರೆ ನನ್ನಂತವರೂ ಇದ್ದಾರಲ್ಲ) ಅದು ಅವಳದ್ದೇ ಕಾಪಿರೈಟಿನ ತಮಿಳ್ಗನ್ನಡಕ್ಕೆ ತಿರುಗುತ್ತಿತ್ತು. ಇಂಗ್ಲೀಷ್ ಬರುತ್ತಿತ್ತಾದರೂ ಅವಳು ಇಂಗ್ಲೀಷಿನಲ್ಲಿ ಮಾತನಾಡಿದ್ದನ್ನು ನಾನಂತೂ ಕಂಡಿಲ್ಲ. ಪ್ರಾಯಶಃ ಮಾತಾಡಿದರೆ ಅದನ್ನೂ ತಮಿಳಿಂಗ್ಲಿಷ್ ಮಾಡಿಬಿಡುತ್ತಾಳೆನ್ನುವ ನಂಬಿಕೆ ನನಗಿದೆ. ಯೆಸ್, ನೋ, ಆಲ್ರೈಟ್, ಸಾರಿ, ಪ್ಲೀಸ್ಗಳಂತರ ಸಣ್ಣ ಪುಟ್ಟ ಪದಗಳಿಂದ ಹೇಗೋ ನಿಭಾಯಿಸುತ್ತಿದ್ದಳೇ ಹೊರತು ಏನೇನೋ ಮಾತನಾಡಿ ಆಪತ್ತು ತಂದುಕೊಳ್ಳುವ ಸಾಹಸಕ್ಕಂತೂ ಕೈಹಾಕುತ್ತಿದ್ದಿಲ್ಲ. ಹೀಗೆಯೇ ಮೂವತ್ತೈದು ವರ್ಷಗಳ ತನ್ನ ಇಡೀ ವೃತ್ತಿಜೀವನವನ್ನು ಬೆಂಗಳೂರಿನಲ್ಲಿ ಕಳೆದಳು ಎಂದರದು ಬೆಂಗಳೂರಿನಲ್ಲಿ ಕನ್ನಡಕ್ಕಿರುವ ಸ್ಥಾನಮಾನವನ್ನು, ಪರಭಾಷಾ ಪ್ರೇಮವನ್ನು ಎತ್ತಿತೋರುವ ದೃಷ್ಟಾಂತ ರೂಪಕವಾದೀತೇನೋ?!

ಆದರೆ ಬಲು ಅಪರೂಪವಾಗಿ ಜನರಲ್ಲಿ ಕಾಣುವ ಹಲವು ಸದ್ಗುಣಗಳು ಅವಳಲ್ಲಿತ್ತು. ಎಷ್ಟು ಕೆಲಸ ಅವಳ ಮುಂಗಟ್ಟೆಗೆ ಬಂದು ಬಿದ್ದರೂ ಒಮ್ಮೆಯೂ ಸಿಡುಕಿದ್ದಿಲ್ಲ, ಬೇರೆ ಮುಂಗಟ್ಟೆಗೆ ಹೋಗಿ ಅಂದದ್ದಿಲ್ಲ, ಇದು ತನ್ನ ಕೆಲಸವಲ್ಲ ಅಂದದ್ದಿಲ್ಲ. ಬೇರೆಯವರ ಕೆಲಸ ಬಂದು ಇವಳ ಮುಂಗಟ್ಟೆಗೆ ಬೀಳುತ್ತಿದ್ದರೂ,ಗಾಣಕ್ಕೆ

ಕಟ್ಟಿದ ಎತ್ತಿನಂತೆ ತನ್ನ ಕುರ್ಚಿಗೆ ಅಂಟಿಕೊಂಡು ಕೂತು ಹೊತ್ತು ಗೊತ್ತಿಲ್ಲದೆ ಕತ್ತೆ ಕೆಲಸ ಮಾಡುತ್ತಿದ್ದವಳನ್ನು ಮೆಚ್ಚದಿರಲು ಸಾಧ್ಯವೇ? ಯಾವುದೇ ಗುಸುಗುಸುವಿನಲ್ಲಿ ಭಾಗಿಯಾಗದೆ ಎಲ್ಲರಲ್ಲೂ ನಗುನಗುತ್ತಾ ಬೆರೆಯುತ್ತಿದ್ದವಳನ್ನು ಇಷ್ಟಪಡದಿರುವುದು ಹೇಗೆ?! ಇದೆಲ್ಲಕ್ಕಿಂತ ಅಮಾಯಕತೆ ಅವಳ ಸಹಜ ಸ್ವಭಾವವಾಗಿತ್ತು. ಸುಲಭವಾಗಿ ಜನರನ್ನು ನಂಬುತ್ತಿದ್ದಳು. ಹೀಗೆ ಭಾಷೆಯ ಒಂದು ವಿಷಯ ಬಿಟ್ಟರೆ ನಮ್ಮ ಕಾಮಾಕ್ಷಿ ಅಪರಂಜಿ.

ಪಾಪ! ಅವಳಿಗೆ ಕನ್ನಡ ಸರಿಯಾಗಿ ಬರುವುದಿಲ್ಲ ಎನ್ನುವ ಕಾರಣಕ್ಕೆ ಅವಳಿಗೆ ಹಲಕೆಲವು ರಿಯಾಯಿತಿಗಳೂ ದೊರಕುತ್ತಿದ್ದವು. ಅವಳಿಗೆ ಬಲು ಗೊಂದಲವಾಗುತ್ತಿದ್ದುದು 'ಏಕವಚನ' 'ಬಹುವಚನ'ದಲ್ಲಿ. ಮೊದಮೊದಲಿಗೆ 'ನೀನು' ಅಥವಾ 'ನೀವು' ಯಾರಿಗೆ, ಎಲ್ಲಿ ಬಳಸಬೇಕೆಂಬ ಸಂದಿಗ್ಧದಲ್ಲಿ ತೊಳಲಾಡಿಬಿಟ್ಟಳು. ಮೇಲಧಿಕಾರಿಗೆ 'ನೀನು', 'ಬಾ' 'ಹೋಗು' ಎಂದೆಲ್ಲಾ ಹೇಳಿ ಕಸಗುಡಿಸುವ ನಿಂಗಮ್ಮನಿಗೆ ಬಲು ಮರ್ಯಾದೆಯಿಂದ 'ನೀವು' 'ಬನ್ನಿ' 'ಹೋಗಿ' ಎನ್ನುತ್ತಾ ಅವಳಿಗೆ ಧಿಗ್ಭ್ರಾಂತಿ ತರಿಸಿ, ಕಡೆಗೆ ಎರಡನ್ನೂ ಒಟ್ಟೊಟ್ಟಿಗೆ ಬಳಸುತ್ತಾ ಕಲಸು ಮೇಲೋಗರವಾಗಿ ಹೋಯಿತು. ಕಡೆಗೆ ಇಂಗ್ಲಿಷ್ ಭಾಷಾ ನೀತಿಯನ್ನನುಸರಿಸುವಂತೆ. ಸರ್ವರಿಗೂ ಏಕವಚನವನ್ನೇ ತನಗೆ ತಾನೇ ಖಾಯಂ ಮಾಡಿಕೊಂಡು ಒಂದು ರೀತಿಯಲ್ಲಿ ನಿಶ್ಚಿಂತೆಯಿಂದ ಮಾತಾಡತೊಡಗಿದಳು. ಆರಂಭದಲ್ಲಿ ಕಿರಿಕಿರಿಯಾದ ಮೇಲಧಿಕಾರಿಗಳಿಗೂ 'ಇವಳನ್ನು ತಿದ್ದಲು ಸಾಧ್ಯವೇ ಇಲ್ಲ' ಎನ್ನುವುದು ತೀರ್ಮಾನವಾದ ಮೇಲೆ ತಾವೇ ಅವಳ ಭಾಷೆಗೆ ಹೊಂದಿಕೊಂಡು ತೆಪ್ಪಗಾದರೆಂದು ಬೇರೆ ಹೇಳಬೇಕಿಲ್ಲ.

ಗ್ರಾಹಕರೊಂದಿಗಾದರೂ ಅಷ್ಟೇ. "ನನಕು ಕನ್ನಡ ಬರುದಿಲ್ಲೆಪ್ಪ. ನಾನು ಇಪ್ಪಡಿಯೇ ಮಾತಾಡುದು" ಎಂದು ಮುಗ್ಧವಾಗಿ ಮೊದಲೇ ಹೇಳಿ ಅವರ ಕೆಲಸವನ್ನು ಮಾತ್ರಾ ಅಚ್ಚುಕಟ್ಟಾಗಿ ಮಾಡಿಕೊಟ್ಟಾಗ ಅವರಾದರೂ 'ನೀನೋ, ನೀವೋ ಹೇಗಾದರೂ ಮಾತಾಡು ತಾಯಿ, ಭಾಷೆಯಲ್ಲಿ ತಪ್ಪಿದ್ದರೂ ಭಾವದಲ್ಲಿ ತಪ್ಪಿಲ್ಲವಲ್ಲ. ಗೊಣಗದೆ ನನ್ನ ಕೆಲಸವನ್ನು ಬೇಗ ಮಾಡಿಕೊಟ್ಟರೆ ಸಾಕು' ಎಂದುಕೊಳ್ಳುವುದಿಲ್ಲವೆ? ದಿನವೂ ವ್ಯವಹಾರದ ಸಮಯ ಮೀರಿ ಬರುವ ಗ್ರಾಹಕರಿಗಂತೂ ಅವಳೊಂದು ದೇವತೆಯೇ! "ಎನ್ನಪ್ಪಾ ಇದು. ನೀನು ದಿನವೂ ಲೇಟಾಗೇ ಬಂದು ನನಕು ಇಪ್ಪಡಿ ಕಷ್ಟ ಕುಡುವೆ. ನಾಳಿಕ್ಕು ಇಪ್ಪಡಿಯೇ ಬಂದರೆ ನಾನು ಚುಮ್ಮನಿರಲ್ಲ. ನೀನು ವಾಪಸ್ಸು ಪೋರುದೇ. ನಾನು ಡೈಲಿ ಒರು ಕಾಕಿ ಮಾದರಿ ಕಾ..ಕಾ.. ಎಂದು ಚೊಲ್ಲುವೆ , ನೀನೋ ಒರು ಕೂಬೆ ಮಾದರಿ ಅಪ್ಪಡಿಯೇ ವಂದುಡುವೆ" ಎಂದು ಕ್ಲಾಸ್ ಹಾಕಿ ಅವರ ಮುಖ ನೋಡಿದರೆ, ಅವರೋ ಅವಳ ಈ ಭಾಷಾ ವಿನೋದದಿಂದ ಸಂತೋಷಚಿತ್ತರಾಗಿ "ಇನ್ನೊಂದ್ಸಲ ಹಂಗೇ ಬೈಯ್ರಿ ಮೇಡಂ. ಚೆನ್ನಾಗಿ ಬೈತೀರಾ. ಖುಷಿಯಾಗತ್ತೆ" ಎಂದು ನಗುತ್ತಾ ಚಲನನ್ನೂ, ದುಡ್ಡನ್ನೂ ಅವಳಿಗೆ ಕೊಟ್ಟರೆ "ಶೆರಿ ಶೆರಿ, ನಿನಕು ಚೊಲ್ಲುಕು ನನಕೆ ಬುದ್ಧಿಯಿಲ್ಲ. ನಾನೊರು ಕೂಬೆ" ಎಂದು ತನ್ನನ್ನೇ ಬೈದುಕೊಂಡು ಅವರ ಕೆಲಸವನ್ನು ಮುಗಿಸಿಕೊಡುತ್ತಿದ್ದಳು. ಮರುದಿನ ಮತ್ತದೇ.

ಈ ಕಾಮಾಕ್ಷಿಯ ಅಮಾಯಕತೆ ಎಷ್ಟಿತ್ತೆಂದರೆ, ಯಾರೋ, ಯಾರ ಬಗ್ಗೆಯೋ ಏನೋ ಹೇಳಿದರೆ ಅದನ್ನು ಆರಾಮಾಗಿ ಆ 'ಯಾರ' ಜೊತೆಗೆ ಮಿಕ್ಕೆಲ್ಲರ ಬಳಿಯೂ ಹೇಳಿಕೊಂಡು ಬಂದುಬಿಡುತ್ತಿದ್ದಳು. ಆ ಮಾತುಗಳು ಹಲವು ಬಾರಿ ಮೂಲದೇವರಿಗೇ

ತಲುಪಿ ಬಲು ಮುಜುಗರವಾಗುವಂತ ಸನ್ನಿವೇಶಗಳು ಸೃಷ್ಟಿಯಾಗಿಬಿಡುತ್ತಿದ್ದವು. ಹೀಗೇ ಒಮ್ಮೆ ಇವಳ ಹೇಳಿಕೆಯಿಂದಾಗಿ ಬಹಳ ಸ್ನೇಹಿತರೆಂದುಕೊಂಡ ಇಬ್ಬರ ನಡುವೆ ಮೌನ ಕಲಹ ಸೃಷ್ಟಿಯಾಗೇಬಿಟ್ಟಿತು. ನಾನು ಸುಮ್ಮನಿರಲಾರದೆ ಅವಳನ್ನು ಕರೆದು "ಕಾಮಾಕ್ಷಿ ನೀನ್ಯಾಕೆ 'ಎ' 'ಬಿ'ಯ ಬಗ್ಗೆ ಹೇಳಿದ್ದನ್ನು ಎಲ್ಲರ ಹತ್ರ ಹೇಳ್ತಾ ಹೋದೆ. ಈಗ ನೋಡು ಅದು 'ಬಿ'ಗೆ ತಿಳಿದು ಅಷ್ಟು ಸ್ನೇಹಿತರಾಗಿದ್ದ ಅವರಿಬ್ಬರ ನಡುವೆ ಮಾತು ನಿಂತುಹೋಗಿದೆ" ಎಂದೆ. "ನನಕೆ 'ಎ' ಹೇಳಿತಳು 'ಬಿ' ಇಪ್ಪಡಿ ಹೇಳಿತಳು, ನನಕು ರೊಂಬ ಬೇಚಾರಾಯ್ತು ಅಪ್ಪಡಿ 'ಎ' ರೊಂಬ ಪಾಪಾಮ್ಮ. ಅತಕೆ ನನಕು ಬೇಚಾರಾಗಿ ಊಟ ಮಾಡುವಾಗ 'ಸಿ', 'ಡಿ' ಕೂಟೆ 'ಎ' ಇಪ್ಪಡಿ ಹೇಳಿದ್ದು ಅಂತ ಚೊಲ್ಲಿಟೆ. ಇನ್ಯಾರ ಕೂಟೇನೂ ಚೊಲ್ಲಿಲ್ಲ" ಎಂದಳು. "ಅಲ್ಲಿಗಾಯ್ತಲ್ಲ. ನಿನಗೇನಾದ್ರೂ ಹೇಳಿದ್ರೆ ಕಹಳೆ ಬಾಯಿಗೆ ಮುತ್ತುಕೊಟ್ಟ ಹಾಗೆ" ಎಂದೆ. "ಅಂದರೆ ಎನ್ನಮ್ಮಾ?" ಎಂದು ಮರುಪ್ರಶ್ನೆ ಮಾಡಿದಳು. ಸರಿ, ಅವಳಿಗೆ ಆ ಗಾದೆಯ ಅರ್ಥ ಮಾಡಿಸುವಷ್ಟರಲ್ಲಿ ನನಗೆ ಸಾಕು ಸಾಕಾಗಿ ಯಾಕಾದರೂ ಇವಳೆದುರು ಆ ಗಾದೆ ಹೇಳಿದೆನೋ ಎನ್ನುವಂತಾಗಿ ತಲೆಚಚ್ಚಿಕೊಂಡೆ.

ಇಷ್ಟೇ ಆದರೆ ಅದರಲ್ಲೇನು ಸ್ವಾರಸ್ಯ. ಮರುದಿನ ಅವಳು ನನ್ನಿಂದ ನಾಲ್ಕು ಮುಂಗಟ್ಟೆಗಳ ದೂರದಲ್ಲಿ ನಿಂತು ಎ'ಯೊಂದಿಗೆ ಮಾತಾಡುತ್ತಿದ್ದಳು. ನಡೆದ ಘಟನೆಗೆ ಸಮರ್ಥನೆ ನೀಡುತ್ತಿದ್ದಳೇನೋ. ವ್ಯವಹಾರದ ಅವಧಿ ಮುಗಿದಿದ್ದರೂ ಇನ್ನೂ ಕೆಲವು ಗ್ರಾಹಕರು ತಮ್ಮ ಕೆಲಸ ಮುಗಿಯಲು ಕಾಯುತ್ತಾ ಕುಳಿತಿದ್ದರು. ಇದ್ದಕ್ಕಿದ್ದಂತೆ ನಮ್ಮ ಕಾಮಾಚ್ಚಿ ಅವಳು ನಿಂತಿದ್ದಲ್ಲಿಂದಲೇ ನನ್ನನ್ನು ಜೋರಾಗಿ ಕರೆದು "ಏ ನೆನ್ನೆ ನೀನು ಯಾರ ಬಾಯಿಕಮ್ಮ ಮುತ್ತು ಕೊಟ್ಟಿದ್ದು?" ಎಂದು ಇಡೀ ಹಾಲಿಗೇ ಕೇಳುವಂತೆ ಒದರಿದಳು. ಎಂಥಾ ಅವಮಾನ ನನಗೆ ಝುಲ್ಲೆಂದುಹೋಯಿತು! ಅಳಿದುಳಿದಿದ್ದ ಗ್ರಾಹಕರು, ಮಿಕ್ಕೆಲ್ಲಾ ಸಹೋದ್ಯೋಗಿಗಳು ನನ್ನ ಮುಖವನ್ನೇ ನೋಡಿ ಬಿದ್ದು ಬಿದ್ದು ನಗತೊಡಗಿದರು. ಚಚ್ಚಿಬಿಡುವಷ್ಟು ಕೋಪ ಬಂತು. ಅವಡುಗಚ್ಚಿ ಬಾಯಿಲ್ಲಿ' ಎಂದು ಅವಳನ್ನು ಹತ್ತಿರ ಕರೆದು "ನೀನು ಹೇಳಿದ ಮಾತಿನ ಅರ್ಥ ಏನೂಂತ ನಿನಗೆ ಗೊತ್ತಾ?" ಎಂದು ದಬಾಯಿಸಿದರೆ ಅವಳು ಒಂದಿಷ್ಟೂ ಕೇರೇ ಮಾಡದೆ, ಒಂದಿಷ್ಟಾದರೂ ದನಿಯನ್ನೂ ತಗ್ಗಿಸದೆ "ನೀನೇ ಅಲ್ವಾಮ್ಮ ನಿನ್ನೆಕು ಯಾರಿಕೋ ಮುತ್ತು ಕೊಟ್ಟಿದ್ದು ಹೇಳಿದ್ದು. 'ಎ' ಕೂಟೆ ಚೊಲ್ಲುವಾಗ ಒರು ವರ್ಡ್ ಮರೆತುಟೆ. ನನಕೆ ಎಕ್ಸ್‌ಪ್ಲೇನ್ ಪಣ್ಣಕು ವಂದಿಲ್ಲೆ. ಅತಕೇ ನಿನ್ನೇ ಕೇಳಿದೆ" ಅಂದಳು. ನಾನಿನ್ನೇನು ಹೇಳಲು ಸಾಧ್ಯ? ಅಕ್ಷರ ಬರದವಳಿಗೆ ವ್ಯಾಕರಣ ಹೇಳಿದ್ದು ನನ್ನ ತಪ್ಪು ಎಂದು ಇನ್ನೊಮ್ಮೆ ತಲೆಚಚ್ಚಿಕೊಂಡೆ.

ಇಂಥ ನಮ್ಮ ಕಾಮಾಕ್ಷಿ ಅಮೇರಿಕಾದಲ್ಲಿರುವ ಮಗಳ ಮನೆಗೂ ಎರಡೆರಡು ಬಾರಿ ಹೋಗಿಬಂದಳು. ನಮಗೇನೋ ಅಭ್ಯಾಸಬಲದಿಂದ ಅವಳ ತಮಿಳ್ಗನ್ನಡ, ತಮಿಳಿಂಗ್ಲಿಷ್ ಎಲ್ಲವನ್ನೂ ಅರ್ಥಮಾಡಿಕೊಳ್ಳುವ ತಾಕತ್ತಿದೆ. ಅಲ್ಲಿನವರಿಗೆ ನೆಟ್ಟಗೆ ಮಾತಾಡುವ ನಮ್ಮ ಇಂಗ್ಲೀಷನ್ನು ಅರ್ಥೈಸಿಕೊಳ್ಳಲೇ ಎಷ್ಟೋ ಕಷ್ಟ. ಅಂತಹುದರಲ್ಲಿ ಇವಳ ತಂಗ್ಲೀಷನ್ನು ಹೇಗೆ ಅರ್ಥಮಾಡಿಕೊಂಡರು? ಎಂತೆಂತಹ ಘಟನೆಗಳು ಜರುಗಿದವು ಎನ್ನುವ ಕುತೂಹಲ ನನಗೆ. ಬ್ಯಾಂಕ್ ಬಿಟ್ಟ ನಂತರ ಸಿಕ್ಕಿಲ್ಲ. ಸಿಕ್ಕಾಗ ಅಲ್ಲಿನ ಸ್ವಾರಸ್ಯಕರ ತಂಗ್ಲೀಷಿನ ಪರಸಂಗಗಳನ್ನು ತಿಳಿದುಕೊಳ್ಳಬೇಕಿದೆ.

■

# ಕನ್ನಡ್ ಪದಗೊಳ್ ಎಂದರೆ ರತ್ನಂಗೆ ಪ್ರಾಣ

**। ಕೆ.ಎಸ್.ಸೋಮೇಶ್ವರ**

'ಕನ್ನಡಕ್ಕಾಗಿ ಒಂದನ್ನು ಒತ್ತು', ಕನ್ನಡಕ್ಕಾಗಿ ಕೈ ಎತ್ತು' ಹೀಗೆ ಹಲವು ಪದ ಪುಂಜಗಳು ನಮ್ಮ ಕಿವಿಗಳಲ್ಲಿ ರಿಂಗಣಿಸುತ್ತಿರುತ್ತವೆ. ಕನ್ನಡ ಭಾಷೆಯ ಬೆಳವಣಿಗೆಗೆ ಹಲವು ಸಾಧನೆಗಳೂ ಆಗಿವೆ. ಕನ್ನಡವನ್ನು ನಿತ್ಯ ಸತ್ಯ ಮಾಡುವಲ್ಲಿ ಇವೆಲ್ಲ ಒಂದು ಹೋರಾಟದಂತಿದೆ. ಇಷ್ಟೆಲ್ಲ ಆದರೂ, ಇತ್ತೀಚಿನ ನಮ್ಮ ಕೆಲವು ಸರಕಾರಿ ಕಾರ್ಯಕ್ರಮಗಳಲ್ಲಿ ಕನ್ನಡವೆಂಬುದು ಹಿಂದಕ್ಕೆ ಸರಿದಿತ್ತು ಎಂಬುದು ಕಪ್ಪು ಚುಕ್ಕೆ ಎನ್ನುವಂತಿದೆ.

ಇಂದಿನ ನಮ್ಮ ಬಳಕೆಯ ಕನ್ನಡದಲ್ಲಿ ಹಲವಾರು ಪದಗಳು ಬೇರೆ ಬೇರೆ ಭಾಷೆಯಿಂದ ಆಮದಾಗಿ ಬಂದು ಬದಲಾಗಿರುತ್ತದೆ. ಇನ್ನು ಹಲವು ಮೂಲತನವನ್ನೇ ಉಳಿಸಿಕೊಂಡು ಕನ್ನಡದ ಪದಗಳೇ ಆಗಿ ನಮ್ಮ ನಾಲಿಗೆಯ ಮೇಲೆ ಹರಿದಾಡುತ್ತಿರುತ್ತದೆ.

ಇಲ್ಲಿ ಕೆಲವೊಂದು ಪದಗಳ ಹೇಳ ಹೊರಟರೆ ನಮ್ಮ ಜನಸಾಮಾನ್ಯರ 'ರಾಜ ರಥ' ಬೈಸಿಕಲ್ ಅಥವಾ ಸೈಕಲ್. ಹೆಸರೇ ಹೇಳುವಂತೆ ಇದೊಂದು ದ್ವಿ ಚಕ್ರ ವಾಹನ. ಇದು ದಶಕಗಳ ಹಿಂದೆ ಅನೇಕ ಘಟಾನುಘಟಿಗಳ ಒಡನಾಡಿಯಾಗಿ ಒಂದು ಅವಿನಾವ ಭಾವ ಹೊಂದಿದೆ. ಇಲ್ಲಿ ಒಬ್ಬರ ಬಗೆಗೆ ಹೇಳ ಬೇಕೆಂದರೆ ಅವರು ಮತ್ಯಾರು ಅಲ್ಲ ನಮ್ಮೊಳಗೊಬ್ಬರಂತಿದ್ದ ಟಿ.ಆರ್.ಶಾಮಣ್ಣನವರು. ಇವರ ಸಾಮಾಜಿಕ ಜೀವನದ ಜೀವನ ಬಂಡಿ 'ಒಂದು ಬೈಸಿಕಲ್ ಎಂದರೆ ಉತ್ಪ್ರೇಕ್ಷೆಯಲ್ಲ. ಇದು ಇವರ ನಿಸ್ಪೃಹ ಸೇವೆಗೆ ಲಾಂಛನದಂತಿತ್ತು. ನಾಲ್ಕೈದು ದಶಕಗಳ ಹಿಂದೆ ಇದು ಮನೆ ಮನೆಯ ಪ್ರತಿಷ್ಠಿತ ವಾಹನವಾಗಿತ್ತು.

ಈ ಸೈಕಲ್ ಎಂಬ ಪದವನ್ನು ಹೇಗೆ ಕನ್ನಡೀಕರಿಸುವುದು ? ಇದನ್ನು ದ್ವಿಚಕ್ರ ವಾಹನವೆಂದು ಹೇಳ ಹೊರಟರೆ ಅದು ಇದರ ಟೈರುಗಳ ಸುತ್ತಳತೆಯನ್ನೂ ಮೀರಿಸುತ್ತದೆ. ಇನ್ನು ಇದರ ಪ್ರತಿ ಸ್ಪರ್ಧಿಗಳಾಗಿ ಸ್ಕೂಟರ ಮತ್ತು ಮೋಟರ ಸೈಕಲ್ ಗಳು ನಾವೇನು ಕಡಿಮೆ ಎಂದು ಗುರ್ ಗುರ್ ಎನ್ನುತ್ತವೆ. ಕಾಲಾಂತರದಲ್ಲಿ ಇವೆಲ್ಲ ಮನೆ ಮನೆಯ ಬಂಧುಗಳೇ ಆಗಿರುತ್ತವೆ. ಹೀಗಾಗಿ ಇವುಗಳಿಗೆ ಕನ್ನಡದ ಯಾವ ಹೆಸರು ಸೂಕ್ತ ಎಂಬುದು (?) ಚಿಹ್ನೆಯಾಗಿಯೇ ಉಳಿಯುತ್ತದೆ. ಇವು ಸೈಕಲ್ , ಸ್ಕೂಟರ್ ಮತ್ತು ಮೋಟಾರ್ ಸೈಕಲ್ ಗಳಾಗೇ ನಮ್ಮ ಜನ ಮಾನಸದಲ್ಲಿ ಉಳಿದು ಬಿಟ್ಟಿವೆ. ಹೀಗಾಗಿ ಅವು ಎಲ್ಲಿಂದಲೋ ಬಂದವರಾಗಿ ನಮ್ಮ ಮನೆಯವರಾಗಿವೆ.

ಇನ್ನು ಕಾರುಗಳಿಗೆ ಬನ್ನಿ. ಇವು ನಾಲ್ಕು ಚಕ್ರದವಾಗಿ ನೆಲದ ಮೇಲೆ ದೃಢವಾಗಿ ನಿಂತು ಸ್ಥಿರವಾಗಿ ಓಡಾಡಬಲ್ಲವು. ಅಂದು ಬಹು ಧಿಮಾಕಿನ ವಾಹನವಾಗಿದ್ದ ಇದು ಈಗ ಸಾಕಷ್ಟು ಮನೆಗಳ ಬಹೂಪಯೋಗಿ ವಾಹನವಾಗಿದೆ. 'ಕಾರ್ ಕಾರ್ ಎಲ್ನೋಡಿ ಕಾರ್' ಎಂಬ ಹಾಡನ್ನು ಇದು ಸತ್ಯವಾಗಿಸಿದೆ. ಇಲ್ಲಿ ಜೀಪ್‌ಗಳನ್ನೂ ಸೇರಿಸಬಹುದು ಇಷ್ಟರಲ್ಲೇ ಹಾರಾಡುವ ಕಾರ್‌ಗಳೂ ನಮ್ಮ ನೀಲ ಗಗನದಲ್ಲಿ ನಮ್ಮ ರೆಕ್ಕೆಯ ಮಿತ್ರರಿಗೆ ಸವಾಲಾಗಿ ಕಾಣ ಸಿಗುತ್ತವಂತೆ .

ಇವೆರಡರ ಮಧ್ಯೆ ಇರುವಂತಹವು ಆಟೋ ರಿಕ್ಷಾಗಳು. ಏಕೆಂದರೆ ಇದು ತ್ರಿ ಚಕ್ರ ವಾಹನ. ರಸ್ತೆಯಲ್ಲಿ ಮೂಗಿಲಿಗಳಂತೆ ಎಲ್ಲೆಂದರಲ್ಲಿ ತೂರಿಕೊಂಡು ಓಡುವುದರಲ್ಲಿ ನಿಸ್ಸೀಮ. ಇದು ನಮ್ಮ ಟಿ ವಿ ಧಾರಾವಾಹಿಗಳಲ್ಲಿ ಯಾವ ಸಮಯದಲ್ಲಾದರೂ ಎಲ್ಲಾದರೂ ಹಾಜರಿರುತ್ತದೆ. ಒಂದು ಬಿಸ್ಕೆಟ್ ಜಾಹೀರಾತಿನಲ್ಲಂತೂ ಅದನ್ನು ತಿಂದ ಚಾಲಕ ಈ ಆಟೋವನ್ನು ವಿಮಾನದಂತೆ ಹಾರಿಸುತ್ತಾನೆ. ಆದರೆ, ನಮಗೆ ಬೇಕಾದಾಗ ಇವು ಗಗನ ಕುಸುಮಗಳೇ ಸರಿ. ಅವರ ಮರ್ಜಿಯಲ್ಲೇ ನಾವು ಅವಲಂಬಿತ. ಇದನ್ನಂತೂ ಮೂರು ಚಕ್ರದ ವಾಹನ ಎಂದು ಕರೆಯುವಷ್ಟರಲ್ಲಿ ಇದು ನಾಲ್ಕು ಮಾರು ಹಾರಿರುತ್ತದೆ.

ಇನ್ನು ನಮ್ಮೆಲ್ಲರನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ಕರೆದೊಯ್ಯುವ ಬಸ್ ಗಳು ಮತ್ತು ಸಾಮಾನು ಸರಂಜಾಮು ಸಾಗಿಸುವ ಲಾರಿಗಳು. ಇವೆಲ್ಲ ನಾಲ್ಕು ಮತ್ತೆರಡು ಚಕ್ರದವಾಗಿ ರಸ್ತೆಗಳಲ್ಲಿ ಗಜ ಗಾಂಭೀರ್ಯ ದಿಂದ ಓಡಾಡುತ್ತಿರುತ್ತವೆ. ಇಲ್ಲಿ ನಮ್ಮ ನೆರೆಮನೆಯ ಸ್ನೇಹಿತ ಬಸವನನ್ನು ಕರೆದಂತೆ ಬಸ್ಯಾ ಎಂದು ಕರೆಯಲಾದೀತೆ ಅಥವಾ ಲಾರಿಯನ್ನು ಅಂದಿನ ಆಸ್ಟೇಲಿಯಾ ಕ್ರಿಕೆಟಿಗ ಬಿಲ್ ಲಾರಿ ಎನ್ನಲಾದೀತೆ? ಬಸ್ಸು ಬಸ್ಸೇ ಮತ್ತು ಲಾರಿ ಲಾರಿಯೇ. ಇದೇ ರೀತಿ ನಮ್ಮ ಕೆಲವು ನಗರಗಳಲ್ಲಿ ಠಳಾಯಿಸುತ್ತಿದ್ದ ಟ್ರಾಮ್ ಗಳೇ ಆಗಿ ಭಾಷೆಯಲ್ಲಿ ನಮ್ಮ ಮನೆ ಮಕ್ಕಳಂತಿದೆ.


ಇವೆಲ್ಲ ಹೀಗಾದರೆ ನಮ್ಮ ರೈಲು ಗಾಡಿಗಳು. ಇದಕ್ಕಂತೂ ಶತಮಾನಗಳ ಇತಿಹಾಸವಿದೆ. ಅಂದಿನಿಂದ ಇಂದಿನವರೆಗೂ ಎಷ್ಟು ಕೋಟಿ ಜನರನ್ನು ಇದು ಹೊತ್ತು ದಡ ಸೇರಿಸಿದೆಯೋ ಅಥವಾ ಏಷ್ಟು ಮಣ ತೂಕದ ವಸ್ತುಗಳನ್ನು ಹಗುರವಾಗಿ ಗುರಿ ಮುಟ್ಟಿಸಿದೆಯೋ ತಿಳಿಯದು. ಈ ಬಗೆಗೆ ನಮ್ಮ ರೈಲ್ವೆ ಇಲಾಖೆಯಲ್ಲೇ ದಾಖಲೆ ಇದ್ದಂತಿಲ್ಲ. ಆಗೊಂದು ಕಾಲದಲ್ಲಿ ಕಲ್ಲಿದ್ದಲಿನ ಶಕ್ತಿಯಿಂದ ಇದು ಹೊಗೆ ಬಿಡುತ್ತಾ ಎಲ್ಲೆಡೆ ಸದ್ದು ಮಾಡುತ್ತ ಓಡುತ್ತಿದ್ದವು. ಕೆಲವು ತೆವಳು ಬಂಡಿಗಳೂ ಆಗಿದ್ದವು. ಆಗ ಇದಕ್ಕೆ " ಉಗಿ ಬಂಡಿ" ಎಂಬ ಅನ್ವರ್ಥ ಆಡು ಭಾಷೆಯ ಪದವೂ ಆಗಿತ್ತು. ಕಾಲಾಂತರದಲ್ಲಿ ಬೇರೆ ಬೇರೆ ಇಂಧನಗಳು ಮತ್ತು ವಿದ್ಯುತ್ ಶಕ್ತಿಯ ಬಳಕೆ ಈ ರೈಲುಗಳ ಶಬ್ದ ಮಾಲಿನ್ಯ ಕಡಿಮೆ ಮಾಡಿ ಸದ್ದಿಲ್ಲದ ಬಂಡಿಗಳಾಗಿ ಪರಿವರ್ತನೆಗೊಂಡಿವೆ. ಈಗ ಇದನ್ನು ಉಗಿ ಬಂಡಿ ಎಂದು ಕರೆದರೆ ಅದು ನಮ್ಮ ಮುಖಕ್ಕೇ ಉಗಿಯುತ್ತದೆ ಅಷ್ಟೆ. ಮುಂದೊಂದು ದಿನ ಸೂರ್ಯ ಶಕ್ತಿಯಿಂದ ಇದು ತನ್ನ ಅಶ್ವ ಶಕ್ತಿಯನ್ನು ಗಳಿಸಿಕೊಂಡರೆ ಇದನ್ನು ಸೋಲಾರ್ ಬಂಡಿ ಎನ್ನಬಹುದೇನೊ. ಅಲ್ಲಿಯವರೆಗೂ ಏನೇ ಇರಲಿ ಇದು ರೈಲು ರೈಲೇ ಅಲ್ಲವೇ!

ಇಷ್ಟೆಲ್ಲ ವಿವಿಧ ಬಂಡಿಗಳ ಬಗ್ಗೆ ಮಾತಾಡುವಾಗ ನಮ್ಮವೇ ಆದ ಎತ್ತಿನ ಗಾಡಿ, ಕುದುರೆ ಗಾಡಿ ಅಥವಾ ಜಟಕಾ ಗಾಡಿಗಳ ' ಬದುಕು ಜಟಕಾ ಬಂಡಿ' ಯ ಬಗ್ಗೆ ಹೇಳಲೇ ಬೇಕಲ್ಲವೇ. ಇವು ಎಷ್ಟು ಮಂದಿ ಅತಿರಥ ಮಹಾರಥರನ್ನು ತನ್ನ ಸಾರೋಟಿನಲ್ಲಿ ಜೈತ್ರ ಯಾತ್ರೆ ಮಾಡಿಸಿದೆಯೋ ನಮ್ಮ ಇತಿಹಾಸಕಾರರಿಗೇ ಸವಾಲಿನ ಪ್ರಶ್ನೆಯೆನಿಸಿದೆ. ನಾವುಗಳು ನೋಡಿದಂತೆ ಇವುಗಳು ನಮ್ಮ ರಸ್ತೆಗಳಲ್ಲಿನ ಏಳು ಬೀಳುಗಳನ್ನು ಲೆಕ್ಕಿಸದೇ ತಮ್ಮ ಬದುಕಿನ ಬಂಡಿಯನ್ನು ಸದ್ದಿಲ್ಲದೇ ಎಳೆದು ನಮ್ಮಗಳ ಸೇವೆ ಮಾಡಿದೆ. ಇವುಗಳಿಗೆ ಮೇಲೆ ಹೇಳಿದ ಯಾವುದೇ ಅಥವಾ ಮುಂದೆ

ಬರಬಹುದಾದ ಯಾವುದೇ ಬಂಡಿಗಳೂ ಸಾಟಿಯಲ್ಲ ಎಂಬುದು ದಿಟ. ಇಲ್ಲಿ ತಮಿಳಿನದೊಂದು ಚಲನ ಚಿತ್ರ 'ವಂಡಿ ಚಕ್ರಂ' ಕೂಡ ಹೆಸರಿಸಬಹುದಾಗಿದೆ.


ಇದರ ಜೊತೆಗೆ ಒಂದು ನಗೆ ನುಡಿಯನ್ನೂ ಬರೆಯುತ್ತಿದೇನೆ:

'ದಶಕಗಳ ಹಿಂದಿನ ವಿಶೇಷ ಚಲನ ಚಿತ್ರ 'ಪುಷ್ಪಕ ವಿಮಾನ' ಇದೊಂದು ಮೂಕಿ ಚಿತ್ರ. ಇದರಲ್ಲಿ ಅಭಿನಯಿಸಿದವರು ಕಮಲ ಹಾಸನ್. ಈಗ ಈ ಚಲನ ಚಿತ್ರ ನಮ್ಮ ದೇಶದ ಎಲ್ಲ ಭಾಷೆಗಳಿಗೆ ಡಬ್ ಮಾಡಿ ಅದನ್ನು ಎಲ್ಲ ಟಿ ವಿ ಚಾನೆಲ್ ಗಳ ಪ್ರೈಂ ಟೈಂ ನಲ್ಲಿ ಪ್ರಸಾರ ಮಾಡುತ್ತಾರಂತೆ. ಇದನ್ನು ಕೇಳಿ ಮೂಕಿ ಚಿತ್ರಗಳ ನಟಶೇಖರ ಚಾರ್ಲಿ ಚಾಪ್ಲಿನ್ ಮೂಕನಾದನಂತೆ (ಇದು ಸುದ್ದಿ). ನಂಬಿದರೆ ನಂಬಿ ಬಿಟ್ಟರೆ ಬಿಡಿ ಈ ಸುದ್ದಿ ಈಗ ಎಲ್ಲ ಸುದ್ದಿ ಚಾನೆಲ್ ಗಳಲ್ಲಿ 'ಬ್ರೇಕಿಂಗ್ ನ್ಯೂಸ್' ಆಗಿ ಪ್ರಸಾರವಾಗುತ್ತಿದೆಯಂತೆ. ಅವುಗಳ ಟಿ.ಆರ್.ಪಿ ಹಾವು ಏಣಿ ಆಟದಲ್ಲಿ ಏಣಿ ಮಾತ್ರ ಅವುಗಳಿಗೆ ಕಾಣಿಸುತ್ತಿದೆಯಂತೆ. ■



ಬೀಚಿ ಪ್ರಕಾಶನ ಪ್ರಕಟಿಸಿರುವ

**ಡಾ.ಡಿ.ವಿ.ಗುರುಪ್ರಸಾದ್, ನಿವೃತ್ತ ಪೊಲೀಸ್ ಮಹಾನಿರ್ದೇಶಕರು**
**ಬರೆದಿರುವ ನೂತನ ಪುಸ್ತಕ**




ದೇಶವನ್ನೇ ಬೆಚ್ಚಿ ಬೀಳಿಸಿದ ನಿರ್ಭಯ ಪ್ರಕರಣ. ನೂರಾರು ಜನ ಅಮಾಯಕರನ್ನು ಕೊಲೆ ಮಾಡಿದ ಡಾಕ್ಟರ್. ಸ್ವತಂತ್ರ ಭಾರತದಲ್ಲಿ ಪ್ರಥಮ ಬಾರಿಗೆ ಒಬ್ಬ ಮಹಿಳೆಯನ್ನು ಗಲ್ಲಿಗೇರಿಸಲಿರುವ ಮಥುರಾ ಪಟ್ಟಣ. 6ನೇ ತರಗತಿ ಪಾಸ್ ಆಗದ ಹುಡುಗನನ್ನು ಪ್ರೀತಿಸಿ ಡಬಲ್ ಡಿಗ್ರಿ ಪಡೆದ ಸ್ಥಿತಿವಂತ ಕುಟುಂಬದ ಮಹಿಳೆ ಶಬನಂನಿಂದ ತನ್ನ ತಾಯಿ, ತಂದೆ, ಅಣ್ಣಂದಿರು, ಅತ್ತಿಗೆಯರು ಮತ್ತು 10 ತಿಂಗಳ ಕಂದಮ್ಮನ ಹತ್ಯೆ. ಹೀಗೆ ಹಲವಾರು ನೈಜ ರೋಚಕ ಕಥೆಗಳ ಸಂಗ್ರಹ

ಬೆಲೆ : **149/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ .

ಆಸಕ್ತರು ಸಂಪರ್ಕಿಸಿ: **Ph:080-29731414, M:9035302302**
**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**
ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

● ದಂಡಆ

V ನೀವು ತಂದೆ/ತಾಯಿ ಆಗುವವರೆಗೂ ನೀವೇ ನಿಮ್ಮ ಬದುಕಿನ ಹೀರೊ. ನಂತರ ನೀವು ಇನ್ನೊಬ್ಬರ ಬದುಕಿನ ಪೋಷಕ ನಟ ಆಗುತ್ತೀರಿ.

V ಪುಸ್ತಕ ವಿಮರ್ಶೆ: ಒಂದು ಸಲ ಕೆಳಗಿಟ್ಟ ಮೇಲೆ ಮತ್ತೆ ನೀವು ಇದನ್ನು ಮುಟ್ಟುವುದಿಲ್ಲ.

V ಜಸ್ಟ್ ಬಿಕಾಸ್ ಯು ಆರ್ ಅಫೆಂಡೆಡ್ ಇಟ್ ಡಸ್ ನಾಟ್ ಮೀನ್ ಯು ಆರ್ ರೈಟ್.

V ಹಣದಿಂದ ಸುಖ ಕೊಳ್ಳಲು ಆಗುವುದಿಲ್ಲ ಎಂದು ಹೇಳಿದವನ ಬಳಿ ಬಹುಶ ಹಣ ಇರಲೇ ಇರಲಿಲ್ಲ.

V ನಮ್ಮ ಅಜ್ಜೀಗೆ 60 ವರ್ಷ ಆದಾಗ ದಿನಾ 5 ಕಿಮೀ ನಡೆಯಲು ಶುರುಮಾಡಿದರು. ಈಗ ಅವರಿಗೆ 90 ವರ್ಷ ತುಂಬಿದೆ. ಎಲ್ಲಿದ್ದಾರೋ ಗೊತ್ತಿಲ್ಲ!

V ಅತ್ಯಂತ ಚಿಕ್ಕ ಉಯಿಲು: ನನ್ನ ಮನಸ್ಸು ಸ್ವಸ್ಥ ಇದ್ದಿದ್ದರಿಂದ ಎಲ್ಲ ಹಣವನ್ನು ಖರ್ಚು ಮಾಡಿದೆ.

V ಐ ಹೇಟ್ ಅಡ್ವೈಸ್ ಅನ್‌ಲೆಸ್ ಐ ಆ್ಯಮ್ ಗಿವಿಂಗ್ ಇಟ್.

V ಡ್ರೈವಿಂಗ್ ಟೀಚರ್; ಕೆಂಪು ದೀಪ ಕಂಡರೆ ನಿಲ್ಲಿಸಿ, ಹಸಿರು ದೀಪ ಕಂಡರೆ ಹೋಗಿ, ನನ್ನ ಮುಖ ಬಿಳುಪಾದರೆ ವೇಗ ತಗ್ಗಿಸಿ.

V ಒಳ್ಳೆ ತೀರ್ಮಾನ ಅನುಭವದಿಂದ ಬರುತ್ತದೆ. ಅನುಭವ? ಕೆಟ್ಟ ತೀರ್ಮಾನದಿಂದ ದಕ್ಕುತ್ತದೆ.

V ಇಫ್ ವಿ ವುಡ್ ಓನ್ಲಿ ನೊ ದಟ್ ಗ್ರಾಂಡ್ ಕಿಡ್ಸ್ ವರ್ ಸಚ್ ಫನ್ ವಿ ವುಡ್ ಹ್ಯಾವ್ ದೆಮ್ ಫಸ್ಟ್.

V ಬಫೆ ಎಂಬುದು ಫ್ರೆಂಚ್ ಪದ. ಅದರ ಅರ್ಥ: ಎದ್ದು ಹೋಗಿ ನೀನೇ ಬಡಿಸಿಕೊ!

V ವೃದ್ಧಾಪ್ಯ ಯಾವಾಗ ಶುರು ಆಗುತ್ತದೆ? ನೀವು ಅದರ ಬಗ್ಗೆ ಚಿಂತೆ ಮಾಡತೊಡಗಿದ ದಿನದಿಂದ.

V ವಿರಮಿಸಲು ಸಮಯ ಯಾವಾಗ ಎಂದರೆ ನಿಮಗೆ ಅದಕ್ಕೂ ಸಮಯ ಇಲ್ಲದಿದ್ದಾಗ.

V ಜನಗಳು ಅನವಶ್ಯಕ ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ. ನಾನು ಈಗ ಹೇಳಿದ್ದು ತಿಳಿಯಿತೆ?

V ಎ ವಿಶ್ ಈಸ್ ಎ ಡಿಸೈರ್ ವಿಥೌಂಟ್ ಅನ್ ಅಟೆಂಪ್ಟ್.

V ಯಾರೂ ಇಲ್ಲದಿದ್ದಾಗ ನೀವು ನಗುತ್ತಿದ್ದರೆ ಅದು ನಿಜವಾದ ನಗುವೇ ಆಗಿರುತ್ತದೆ.

V 'ಬೀರು' ನಾಟಕದ ವಿಮರ್ಶೆ: ಖಾಲಿ!

■

# ಹುಷಾರು, ಹುಷಾರು

। ನಂನಾಗ್ರಾಜ್

ನಾನು ಹಿರಿಯ ನಾಗರೀಕನಾದ ನಂತರ ನನ್ನ ಕುಗ್ಗಿದ ಗಮನ ಹಾಗೂ ನೆನಪಿನ ಶಕ್ತಿಯ ಸಮ್ಮಿಲನದ ಕಾರಣದಿಂದ ನನ್ನ ಹೆಂಡತಿಯ 'ಹುಷಾರು', 'ಹುಷಾರು' ಪಲ್ಲವಿ ನಿರಂತರವಾಗಿ ಸಾಗಿದೆ.

ಏನ್ರೀ ಇದು, ಹಣೆಯ ಮೇಲೆ ಮತ್ತೆ ಬೋರೆ?

ಅಯ್ಯೋ, ನೀನು ಹೇಳಿದ್ದ ಹಾಗೆ ಎಡಗಡೆ ಹಾಗೂ ಬಲಗಡೆ ಎರಡೂ ಕಡೆ ನೋಡ್ಕೊಂಡು ಹಾಗೂ ಸಿಗ್ನಲ್ 'ಹಸಿರು' ಬಂದಾಗಲೇ ರೋಡ್ ಕ್ರಾಸ್ ಮಾಡಿದೆ. ಆದರೆ ಮುಂದೆ ಇದ್ದ 'ಬೃಹತ್' ಪಾಟಹೋಲ್ ನೋಡಲಿಲ್ಲ!

ಈ ತಿಂಗಳಲ್ಲಿ ಎರಡನೆ ಬೋರೆ ಇದು. ಗೆಸ್ಟ್ ರೂಂ ಬಾಗಿಲು ಜೋರಾಗಿ ಎಳೆದು ಅದು ನಿಮ್ಮ ಹಣೆಗೆ ಬಡಿದು ಬೋರೆ ಬಂದಿತ್ತು. ಹೇಳಿದ್ದೆ ತಾನೆ, 'ಹುಷಾರು' ಆ ಬಾಗಿಲು ಸ್ವಲ್ಪ ಬಿಗಿ ಅಂತ!

ಛೆ, ಛೆ, ಈ ಬೋರೆ ನಿಮ್ಮ ಬಾಲ್ಡ್ ಹೆಡ್ ಕೆಳಗೆ ಉಪಗ್ರಹದ ತರಹ ಮೆರೀತಿದೆ!

ಈಗ ತಾನೆ ಸ್ಟೊವ್ ಆರಿಸಿದೀನಿ. 'ಹುಷಾರು' ಪಾತ್ರೆ ಮುಟ್ಟ ಬೇಡಿ ಕೈಸುಡುತ್ತೆ. ನಾನು ಏನು ಅಡಿಗೆ ಮಾಡಿದೀನಿ ಅಂತ ತಿಳ್ಕೋಳೋ ಆತುರ. ಆಗೋ ತನಕ ಕಾದೋರು ಆರೋ ತನಕ ಕಾಯ್ಲಿಲ್ಲ ಅನ್ನೋ ಹಾಗೆ.

'ಹುಷಾರು', ಇಸ್ತ್ರಿ ಪೆಟ್ಟಿಗೆ ಬಿಸಿಯಾಗಿದೆಯಾ ಅಂತ ತಿಳ್ಕೋಳಕ್ಕೆ ಮುಟ್ಟಿ ನೋಡಬೇಡಿ ಅಂತ ಎಷ್ಟು ಸಾರ್ತಿ ಹೇಳಿದರೂ ಮುಟ್ಟಿ ಬೆರಳು ಸುಟ್ಟುಕೊಂಡು ಸ್ವಲ್ಪ ಎಣ್ಣೆ ನೀವು ಅಂತ ಗೋಗರೀತೀರಾ!

ಅಯ್ಯೋ, ಅಯ್ಯೋ, ಅದ್ಯಾಕೆ ತಲೆ ಹಾಗೆ ಪರಾ, ಪರಾಂತ ಬಾಚ್ಕೋತೀರ? ಹುಷಾರು, ಇರೋ ಮೂರು ಮತ್ತೊಂದು ಕೂದಲೂ ಕಿತ್ಹೋಗಲ್ವೇ?

'ಹುಷಾರು', ನಿಧಾನವಾಗಿ ನಡೆದಾಡಿ. ಈಗ ತಾನೆ ಕೆಲಸದವಳು ಮನೆ ಸಾರಿಸಿದಾಳೆ. ಗೊತ್ತಲ್ಲ ಅವಳ ಕೆಲಸ, ಅಲ್ಲಲ್ಲಿ ಜಪಾನ್ ದೇಶದ ತರಹ ದ್ವೀಪಗಳಿರುತ್ತವೆ. ಹಾಗೂ ಅವು ಒಣಗುವ ತನಕ ನಿಮ್ಮ ಎಕ್ಸ್ಟ್ರಾ ಫಿಟಿಂಗ್ಸ್ (ಕನ್ನಡಕ, ಹಿಯರಿಂಗ್ ಎಯ್ಡ್, ಡೆಂಚರ್) ಎಲ್ಲವನ್ನೂ ಕಳಚಿಟ್ಟು ಓಡಾಡಿ, ಯಾವುದೊಂದು ಒಡೆದರೂ ವೃಥಾ ಖರ್ಚು!

ದೇವಸ್ಥಾನಕ್ಕೆ ಹೋಗ್ತಿದೀರಾ? 'ಹುಷಾರು'. ಈ ವರ್ಷದಲ್ಲಿ ನಾಲ್ಕು ಜೊತೆ ಚಪ್ಪಲಿಗಳು ಕಳ್ಕೊಂಡು/ಬದಲಾಯಿಸ್ಕೊಂಡು ಬಂದಿದೀರಾ. ಒಂದು ರೂಪಾಯಿ ಉಳಿಸಕ್ಕೆ ಹೋಗಿ 'ಬೇರ್‌ಫುಟ್ ಬಾಯ್' ಆಗಿ ಬರಬೇಡಿ! ಹ್ಞಾ! ಹಾಗೇ ಇನ್ನೊಂದು

ವಿಷಯ, ಆಗಾಗ ವಾಪಸ್ಸಾಗುವ ಹಾಗೆ ನಿಮ್ಮ ಸ್ಲಿಪ್‌ಆನ್‌ಗಳನ್ನು ಎಡದ್ದು ಬಲಕ್ಕೆ ಬಲದ್ದು ಎಡಕ್ಕೆ ಹಾಕ್ಕೊಂಡು ಚಾರ್ಲಿ ಚಾಪ್ಲಿನ್ ತರಹ ನಡ್ಕೊಂಡು ಬರಬೇಡಿ!!

ಬ್ಯಾಂಕಿಗೆ ಹೊರಟ್ರಾ? 'ಹುಷಾರು', ಸೇಫ್ಟಿಗೋಸ್ಕರ ಸೆಲ್ಫ್ ಚೆಕ್ ಹಿಂದೆ ಸೈನ್ ಮಾಡಿದ ನಂತರ ಹಿಂಬದಿಯಲ್ಲಿ ಸಿಕ್ಕಿಸಿದ್ದ ಕ್ಯಾಪ್‌ಅನ್ನು ಮುಂಬದಿಗೆ ಸಿಕ್ಕಿಸದೇ ಹಾಗೇ ಇಟ್ಕೊಂಡು ಜೇಬೆಲ್ಲ ಕಲೆ ಮಾಡ್ಕೊಂಡು ವಾಪಸ್ಸಾಗ್ತೀರ ಎಂತಹ ಕಲಾವಿದ? 'ದಾಗ್ ಅಚ್ಛಾ ಹೈ'ನಲ್ಲಿ ನಂಬಿಕೆಯೋ? ಒಮ್ಮೊಮ್ಮೆ ಇಷ್ಟಕ್ಕೇ ನಿಲ್ಲಲ್ವೇ ವಿಷಯ. ನಿಮ್ಮ ಕುಗ್ಗಿದ ಬಾಡಿ ಭಾಷೆ ನೋಡಿದರೇ ಎಂತಹವರು ಎಂಬುದು ಸ್ಪಷ್ಟ. ಯಾರಾದರೂ ಸ್ಮಾರ್ಟಿ ಸ್ವಲ್ಪ ಪೆನ್ ಕೊಡ್ತೀರಾ ಎಂದು ಕೇಳಿದಾಗ ಅವನಿಗಿಂತ ಸ್ಮಾರ್ಟ್ ಅಂದುಕೊಂಡು ಕ್ಯಾಪ್ ಕೈಯಲ್ಲಿಟ್ಕೊಂಡು ಬಾಡಿ ಮಾತ್ರ ಕೊಡ್ತೀರ, ಗೊತ್ತಿರುವ ವಿಷಯವೇ, ಸ್ವಲ್ಪ ಸಮಯ ಬಾಡಿಗಾಗಿ ಕಾದು ಬೇಸತ್ತು ಕ್ಯಾಪ್ ಹಿಡ್ಕೊಂಡು (ಹಾಕಿಸ್ಕೊಂಡು?) ವಾಪಸ್ಸಾಗ್ತೀರ!

ಕನ್ನಡಕ ಮೇಜಿನ ತುದಿಯಲ್ಲಿಡ್ಬಿಡ್ತೀರಿ. ಹಿಯರಿಂಗ್ ಎಯ್ಡ್ ಎಲ್ಲೀಂದ್ರಲ್ಲಿ ಕೆಳಗೆ ಬಿದ್ದು ಡ್ಯಾಮೇಜ್ ಆಗ್ಬೋದು 'ಹುಷಾರು' ಅಂತ ಎಷ್ಟು ಸಾರ್ತಿ ಹೇಳೋದು? ಯಾವಾಗಲೂ ಸ್ವಸ್ಥಾನದಲ್ಲಿರುವುದು ನಿಮ್ಮ ಡೆಂಚರ್ ಮಾತ್ರ ಅದಕ್ಕೆ ಎಡಬಿಡದೇ ಕೆಲಸ ಅಲ್ವೇ?

ಕಾರಲ್ಲಿ ಒಬ್ಬರೇ ಹೋಗುತ್ತಿದ್ದೀರ 'ಹುಷಾರು' ಅರವತ್ತೈದರ ನಂತರ ನಿಮ್ಮ ಕಾರ್ ಡ್ರೈವಿಂಗ್ ಹದಗೆಟ್ಟಿದೆ. ಅರ್ಧ ಕಿ.ಮಿ. ಹೋಗುವುದರೊಳಗೇ ತೂಕಡಿಸ್ಬಿಡ್ತೀರ. ತಿರುಗುವಾಗ ಇಂಡಿಕೇಟರನ್ನು ಎಡದ್ದು ಬಲಕ್ಕೆ, ಬಲದ್ದು ಎಡಕ್ಕೆ ಹಾಕುತ್ತೀರಿ. ಇನ್ನು ಸರ್ಕಲ್ ಬಂದರೆ ಕನ್ಫ್ಯೂಷನ್, ರೈಟಾ, ಲೆಫ್ಟಾ ಅಥವಾ ಸ್ಟ್ರೈಟಾ? ನಿಮ್ಮ 'ದಿಕ್ ಸೆನ್ಸ್' ದಿಕ್ಕಾಪಾಲಾಗಿದೆ!

ಮುಖ್ಯ ರಸ್ತೆಗೆ ಹೋಗಲು ಮೂರನೆಯ ಕ್ರಾಸಲ್ಲೇ ಏಕೆ ಹೋಗುತ್ತೀರೆಂದು ನನಗೆ ಗೊತ್ತು. ಅಲ್ಲೇ ಇರುವುದು 'ವಿಷಯ'. ಸಬ್‌ಸ್ಟಿಟ್ಯೂಟ್ 'ವಿಷಯ' ಬೈ ವನಜ! ನಿಮ್ಮನ್ನು ಕಂಡಾಗ ಅವಳಲ್ಲಿ ಉಕ್ಕುವ ಉತ್ಸಾಹ, ಅವಳ ಹಾವ, ಭಾವ, ವಾರೆನೋಟ, ವೈಯ್ಯಾರ ಹಾಗು ಬೆಡಗು, ಬಿನ್ನಾಣ ನಾನು ಕಂಡಿಲ್ಲವೇ? ಹುಷಾರು, ಹುಷಾರು.

ನಾಮಕರಣಕ್ಕೆ ಹೋಗುತ್ತಿದ್ದೇವೆ, ಆದರೆ 'ಹುಷಾರು' ಆ ಪುಟ್ಟ ಮಗುವನ್ನು ಎತ್ತಿಕೊಳ್ಳಲು ಹೋಗಬೇಡಿ. ನಿಮ್ಮ ಬಟರ್ ಹ್ಯಾಂಡ್ಸ್‌ಲಿ ಬಿಯರ್ ಬಾಟಲ್ ಬಿಟ್ಟು ಬೇರೇನೂ ಭದ್ರವಾಗಿರೊಲ್ಲ. ನಿಮ್ಮ ಕಾಲದ ಕ್ರಿಕೆಟರ್‌ಗಳು ಕ್ಯಾಚ್ ಹಿಡಿದು ಬಿಡ್ತಾ ಇದ್ರಲ್ಲಾ ಹಾಗೆ!

ನಿದ್ರೆ ಬರದೇ ಹೊರಳಾಡುವವರನ್ನು ನೋಡಿದೀನಿ. ನೀವು ನಿದ್ರೆಯಲ್ಲಿ ಅದೆಷ್ಟು ಹೊರಳಾಡುತ್ತೀರ್ರೀ, 'ಹುಷಾರು' ಮಂಚದಿಂದ ಬಿದ್ದು ಏನಾದರೂ (!) ಮುರಿದ್ರೆ ಏನ್ಗತಿ.

■

# ಬಿಗ್ಗ್ ಬೋಸ್

ಟಿವಿಯವರು ಬಲು ಶೀವಿಯಿಂದ ಪ್ರದರ್ಶಿಸುವ ರಿಯಾಲಿಟಿ ಷೋ ಆದ 'ಬಿಗ್ಗ್ ಬೋಸ್' ಕಾರ್ಯಕ್ರಮದಲ್ಲಿ ಒಂದು ವಾರ ಉಂಡು, ತಿಂದು, ಕೋತಿ ಚೇಷ್ಟೆ ಮಾಡಿ ಹೊರಬಂದಿದ್ದ ಕ್ಯಾತೆ ನಟಿಯನ್ನು ಟಿವಿಯೊಂದಕ್ಕೆ ಸಂದರ್ಶಿಸುವ ಅವಕಾಶ ನನಗೆ ಒದಗಿ ಬಂದಿದ್ದು, ನನಗೂ ಹೆಣ್ಣುಕೊಟ್ಟ ನನ್ನ ಮಾವನ ಆಶೀರ್ವಾದದಿಂದ ಎಂದು ನಾನು ಭಾವಿಸುತ್ತೇನೆ. ಈ ಶುಭ ಸಂದರ್ಭಕ್ಕಾಗಿ ನಾನು ಕನ್ನಡ ಕುಲಕೋಟಿಗೆ ಶಿರಬಾಗಿ ವಂದಿಸುತ್ತೇನೆ, ಆಭಾರಿಯಾಗಿರುತ್ತೇನೆ, ಕೃತಜ್ಞನಾಗಿರುತ್ತೇನೆ, ಎಂದೆಲ್ಲಾ ಹೇಳುವುದು ಇಲ್ಲಿಗೆ ಅಪ್ರಸ್ತುತ.

'ನಮಸ್ಕಾರ ನಟೀಮಣಿಯವರಿಗೆ. ನೀವು ಹಲವಾರು ಚಲನಚಿತ್ರಗಳಲ್ಲಿ ಅಭಿನಯಿಸಿದರೂ ಜನ ನಿಮ್ಮನ್ನು ಗುರುತಿಸಲಿಲ್ಲ. ಆದರೆ ಬಿಗ್ಗ್ ಬೋಸ್ ಮೂಲಕ ಎಲ್ಲರ ಹೃದಯದಲ್ಲಿ ಮನೆ ಮಾಡಿದ್ದೀರಿ. ಕನ್ನಡ ಕುಲಕೋಟಿಗೆ, ಅಲ್ಲಲ್ಲ, ವಿಶ್ವದ ನೋಡುಗ ಸಮುದಾಯಕ್ಕೆ ನಿಮ್ಮ ಸಂದೇಶವೇನು?' ನನ್ನದು ಡಿಬಟ್ ಪ್ರಶ್ನೆ.

'ಬಿಗ್ಗ್ ಬೋಸ್ ಅಮೋಘ ಅನುಭವ. ಇಲ್ಲಿ ಜಾತಿ, ಮತ, ಧರ್ಮ, ಬಣ್ಣ, ಜಾಣತನ–ಪೆದ್ದುತನ, ಅ ಮತ್ತು ಹ ಗಳ ನಡುವಿನ ವ್ಯತ್ಯಾಸ, ಇವೇನೂ ಇಲ್ಲ. ಇಲ್ಲಿ ಸ, ಶ, ಷಗಳು ಒಂದೇ, ಅಲ್ಪ ಪ್ರಾಣ ಮತ್ತು ಮಹಾಪ್ರಾಣಗಳ ನಡುವೆ ಭೇದವಿಲ್ಲ. ಇದು ನಮ್ಮ ದೇಶದ ವಿವಿಧತೆಯಲ್ಲಿ ಏಕತೆ ಎಂಬುದನ್ನು ಸಾರುತ್ತದೆ.'

'ಮತ್ತೆ ನೀವು ಅ ಮತ್ತು ಹ ಗಳನ್ನು ಸರಿಯಾಗಿಯೇ ಉಚ್ಚರಿಸಿದ್ದೀರಿ?'

'ಅದಕ್ಕೇ ನಾನು ಹೊರಕ್ಕೆ ಬಂದಿದ್ದು. ಈ ಮನೆಯಲ್ಲಿ ಹಳ್ಳಿಯ ಭಾಷೆಯನ್ನು ಜನಪ್ರಿಯಗೊಳಿಸಲಾಗುತ್ತದೆ,' ಆಕೆ ಮುಂದುವರಿಸಿದಳು.

'ಹಳ್ಳಿಯ ಭಾಷೆ ಎಂದರೆ ಮಂಡ್ಯ ಕನ್ನಡ ತಾನೇ?'

'ಹೌದು ಮತ್ತೇನು ಎಂದಿದ್ದೀರಿ? ಕರ್ನಾಟಕ ರಾಜ್ಯ ಎಂದರೆ ಬೆಂಗಳೂರು, ಮಂಡ್ಯ, ರಾಮನಗರ, ಮೈಸೂರು. ಕರ್ನಾಟಕದ ಅಧಿಕೃತ ಜಾತಿ ಎಂದರೆ ಒಕ್ಕಲಿಗರು. ಹಾಗಾಗಿ ಟಿವಿಗಳಲ್ಲಿ, ಸಿನೆಮಾಗಳಲ್ಲಿ ಹಳ್ಳಿಯವರು ಎಂದು ತೋರಿಸಲು ಈ ಸ್ಲಾಂಗ್ ಬಳಸಿದರಾಯಿತು. ಬಲು ಸುಲಭ,' ಎಂದಳು ನಟೀಮಣಿ.

'ಕರ್ನಾಟಕದಲ್ಲಿ ಇತರ ಶೈಲಿಯ ಮಾತುಗಳೂ ಇವೆಯಲ್ಲ, ಉದಾಹರಣೆಗೆ ಮಂಗಳೂರು, ಕುಂದಾಪುರ, ಧಾರವಾಡ, ಇತ್ಯಾದಿ?' ನಾನು ಕೇಳಿದೆ.

'ಅವನ್ನೆಲ್ಲಾ ತಮಾಷೆಯ ಮತ್ತು ಲೇವಡಿಯ ಪಾತ್ರಗಳಿಗೆ ಮಾತ್ರ ಬಳಸುವುದು.'

ಸರಿ, ಬಿಗ್ಗ್ ಬಾಸ್ ಮನೆಯ ವಾಸದ ಬಗ್ಗೆ ಅರುಹಿ,' ನಾನು ಉವಾಚಿಸಿದೆ.

'ಈ ಮನೆಯಲ್ಲಿ ವಾಸಿಸುತ್ತಿರುವವರು ಪರಸ್ಪರ ಬೆಂಕಿ ಕಾರುತ್ತಿದ್ದರೂ ಒಳಗೊಳಗೇ ಅದುಮಿಟ್ಟುಕೊಂಡು ಬದುಕಬೇಕಾದ ಅನಿವಾರ್ಯತೆ ಇದೆ, ನಮ್ಮ

ಸಮ್ಮಿಶ್ರ ಸರಕಾರದಂತೆ.'

'ಸರಿ, ನಿಮ್ಮ ಅನುಭವಗಳನ್ನು ಹೇಳಿ.'

'ಒಳಗೆ ಯಾವುದೇ ಚಿಂತೆ ಇಲ್ಲ, ಊಟ, ನಿದ್ರೆಗಳನ್ನು ಮಾಡಿಕೊಂಡಿದ್ದರಾಯಿತು. ಕೆಲಸ, ದುಡಿತ, ಸಂಸಾರ, ಜಗತ್ತಿನ ಆಗುಹೋಗುಗಳು, ಇವಾವುದರ ಜವಾಬ್ದಾರಿಗಳೂ ಇಲ್ಲ. ನನ್ನ ಅಭಿಪ್ರಾಯದಂತೆ ಇಡೀ ಜಗತ್ತನ್ನೇ ಬಿಗ್ಗ್ ಬೋಸ್ ಮನೆ ಮಾಡಬೇಕು. ಆಗ ಎಲ್ಲೆಡೆ ಸುಖ–ಶಾಂತಿ ನೆಲೆಸುತ್ತದೆ,' ನಟೀಮಣಿಯ ಅಭಿಪ್ರಾಯ.

'ನನಗೆ ಅದು ಸರಿಯಾಗಿ ಅರ್ಥವಾಗಲಿಲ್ಲ. ಬಿಡಿಸಿ ಹೇಳಿ,' ಎಂದೆ.

'ನೋಡಿ, ಪರಸ್ಪರ ವೈಮನಸ್ಸಿರುವ ದೇಶಗಳ ಪ್ರಧಾನಮಂತ್ರಿಗಳನ್ನು, ಅದಾಗದಿದ್ದರೆ ಕನಿಷ್ಠ ವಿದೇಶಾಂಗ ಮಂತ್ರಿಗಳನ್ನು ಈ ಮನೆಯೊಳಗೆ ತಂದು ಕೂಡಿಹಾಕಬೇಕು. ರೌಡಿಗಳನ್ನು, ನಕ್ಸಲರನ್ನು, ಆತಂಕವಾದಿಗಳನ್ನು, ಮಿಲಿಟೆಂಟ್‌ಗಳನ್ನು ಕೂಡಾ ಒಳಗೇ, ಒಂದೆಡೆಯಲ್ಲಿಯೇ ಸೇರಿಸಿ ಇರಲು ಬಿಡಬೇಕು. ನಂತರ ಅವರಲ್ಲಿ ಪರಸ್ಪರ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಇದರಿಂದಾಗಿ ಸುಖ–ಶಾಂತಿ ನೆಲೆಸುತ್ತದೆ,' ಈ ಸಂದೇಶದೊಂದಿಗೆ ಸಂದರ್ಶನ ಮುಗಿಯಿತು.

# ಬಂದ್ ಮಾಸ

ನನ್ನ ಗೆಳೆಯ ಕಾಶೀಪತಿ ಅಂತಿಂಥ ವ್ಯಕ್ತಿಯಲ್ಲ. ನಾವೆಲ್ಲಾ ಅವನನ್ನು ಚೂರು ಮೆಣಸಿನ ಕಾಯಿ ಎಂದು ಕರೆಯುತ್ತಿದ್ದೆವು ಮತ್ತು ಅದು ಸುಳ್ಳಲ್ಲ ಎಂಬುದು ಅವನು ರಾಜಕೀಯಕ್ಕೆ ಅಡಿಯಿಟ್ಟಮೇಲೆ ಶತಶಃ ಸಾಬೀತಾಗಿದೆ. ಬಾರೊಂದರ ಮಬ್ಬು ಬೆಳಕಿನಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದಾಗ ಅವನು ಉದುರಿಸಿದ ಅಣಿಮುತ್ತುಗಳನ್ನು ನಾನು ಬರೆಯದಿದ್ದರೆ ಅದು ನಮ್ಮ ಸ್ನೇಹಕ್ಕೇ ಮಾಡಿದ ಅವಮಾನ.

'ಇವತ್ತು ಬಂದ್ ಇದೆ, ಬಸ್ ಬಂದಿಲ್ಲ. ನಿನ್ನೆ ಬಂದ್ ಇರಲಿಲ್ಲ, ಬಂದಿದೆ,' ಎಂದು ನಾನು ಮಾತು ಆರಂಭಿಸಿದೆ.

'ಹೂಂ ಕಣೋ. ಆಗಾಗ ಈ ರೀತಿ ಬಂದ್ ಆಚರಿಸುತ್ತಿದ್ದರೆ ಎಷ್ಟೊಂದು ಜನಕ್ಕೆ ತೊಂದರೆ. ಇದಕ್ಕೆಲ್ಲಾ ಒಂದು ಅಂತ್ಯ ಹಾಕಲೇಬೇಕು. ಅದಕ್ಕಾಗಿ ನಾನು ಹೊಸ ಒಂದು ಐಡಿಯಾ ಯೋಚಿಸಿದ್ದೇನೆ, ಯೋಚಿಸಿದ್ದೇನೆ.' ಎಂದ. ಅದು ಅವನಾಡಿದ ಮಾತೋ, ಅವನೊಳಗಿನ 'ಪರಮಾತ್ಮ' ಆಡಿದ ಮಾತೋ ತಿಳಿಯಲಿಲ್ಲ. ಬಂದ್‌ಗಳನ್ನು ಬಹಿಷ್ಕರಿಸಬೇಕು ಎಂದು ಎಷ್ಟೋ ಜನ ಹೇಳಿ, ಅದನ್ನು ಪ್ರತಿಭಟಿಸಲು ಬಂದ್ ಆಯೋಜಿಸಿದ ದೇಶ ನಮ್ಮದು. ಮುಳ್ಳಿನಿಂದಲೇ ಮುಳ್ಳನ್ನು ತೆಗೆಯಬೇಕೆಂಬ ಗಾದೆಯೇ ಇಲ್ಲವೇ?

'ಸರಿ ಕಣೋ. ಏನು ಮಾಡಬೇಕೆಂದಿದ್ದೀ?' ನಾನು ಕೇಳಿದೆ.

'ಹೀಗೆ ಆಗಾಗ ಬಂದ್ ಆಚರಿಸುವ ಬದಲು ಅದನ್ನು ಸರಿಯಾಗಿ ಆರ್ಗನೈಸ್ ಮಾಡಬೇಕು. ವರ್ಷದ ಒಂದು ತಿಂಗಳು ಬಂದ್ ಮಾಸ ಎಂದು ಆಚರಿಸಬೇಕು. ಆಗ ಜನಕ್ಕೆ ಗೊಂದಲ ಆಗುವುದಿಲ್ಲ,' ಎಂದವನು ಎರಡು ಗುಟುಕು ಶಕ್ತಿವರ್ಧಕ ಪಾನೀಯ ಹೀರಿದ. ಅರೆ ಕತ್ತಲಲ್ಲಿಯೂ ಅವನ ಮುಖದಲ್ಲಿ ಹೊಳಪು ಕಂಡಿತು.

‘ಸರಿ, ವಿವರಿಸುವಂಥವನಾಗು,’ ಎಂದು ನಾಟಕೀಯವಾಗಿ ಹೇಳಿದೆ.


‘ನಮ್ಮ ಸರಕಾರ ಅಧಿಕಾರಕ್ಕೆ ಬಂದರೆ ವರ್ಷದ ಒಂದಿಡೀ ತಿಂಗಳನ್ನು ‘ಬಂದ್ ಮಾಸ’ ಎಂದು ಘೋಷಿಸುತ್ತದೆ. ಆ ಮಾಸದಲ್ಲಿ ಯಾರು, ಯಾವುದೇ ಕಾರಣಕ್ಕೂ ಬಂದ್ ಮಾಡಬಹುದು. ವರ್ತಕರು, ಕೂಲಿಯವರು, ಸಾರಿಗೆ ಸಂಸ್ಥೆಗಳವರು ಅದಕ್ಕೆ ಮಾನಸಿಕವಾಗಿ ಸಿದ್ಧರಾಗಿರುವ್ಯದರಿಂದ ಆಗುವ ತೊಂದರೆಗಳು ಕಡಿಮೆ. ಬಂದ್‌ಗೆ ಬೇಕಾಗುವ ಎಸೆಯಲು ಕಲ್ಲುಗಳನ್ನು, ಸುಡಲು ಟೈರ್‌ಗಳನ್ನು, ಧ್ವಂಸ ಮಾಡಲು ಬಸ್‌ಗಳನ್ನು ಸರಕಾರವೇ ಬೇಡಿಕೆಯ ಮೇಲೆ ಒದಗಿಸುತ್ತದೆ ಮತ್ತು ಅವುಗಳನ್ನು ನೋಡಿಕೊಳ್ಳಲು ಒಬ್ಬ ಸಚಿವನನ್ನು ನೇಮಿಸಲಾಗುತ್ತದೆ.’

‘ಬಸ್‌ಗಳು ಏಕೆ?’

‘ಬಂದ್‌ನ ಯಶಸ್ಸು ಆ ಬಾರಿ ಎಷ್ಟು ಬಸ್ಸುಗಳನ್ನು ಸುಡಲಾಗಿದೆ ಎಂಬುದರ ಮೇಲೆ ನಿರ್ಧಾರಿತವಾಗುತ್ತದೆ. ಹೆಚ್ಚು ಬಸ್ಸುಗಳು ಬೂದಿಯಾದರೆ ಹೆಚ್ಚು ಯಶಸ್ಸು. ಯಾವುದಾವುದೋ ಬಸ್ಸುಗಳನ್ನು ಸುಡುವ ಬದಲು ಗುಜರಿಯಲ್ಲಿರುವ ನಮ್ಮ ಹಳೆಯ ಬಸ್ಸುಗಳನ್ನೇ ಅವರಿಗೆ ಮಾರಿದರೆ ಒಳ್ಳೆಯದಲ್ಲವೇ? ಹಾಗೆಯೇ ಕಲ್ಲುಗಳನ್ನು ಎಸೆಯಲೂ ಅತ್ಯುತ್ತಮ ಗುರಿಕಾರರನ್ನು ಕೂಡಾ ಒದಗಿಸಲು ಯೋಚಿಸಿದ್ದೇನೆ. ಇದರಿಂದ ಜನರು ತಮ್ಮ ರೆಟ್ಟೆಗೆ ನೋವು ಉಂಟು ಮಾಡಿಕೊಳ್ಳುವುದು ಕಡಿಮೆಯಾಗುತ್ತದೆ. ಏನಂತಿ?’ ಎಂದು ನನ್ನನ್ನೇ ಕೇಳಿದ. ತಲೆಯನ್ನು ‘ಅಲ್ಲಾಡ್ಸು, ಅಲ್ಲಾಡ್ಸು, ಮೇಲೆ ಕೆಳಗೆ ಅಲ್ಲಾಡ್ಸು,’ ಬಿಟ್ಟರೆ ಇನ್ನೇನು ತಾನೇ ಅನ್ನಲು ಸಾಧ್ಯ?


■

---



# ಚೆಂಗಾಯಣ ಮತ್ತು ಇತರ ಹಾಸ್ಯ ಲೇಖನಗಳು

**ಲೇಖಕರು : ಜಿ.ವಿ.ಅರುಣ**
ಪ್ರಕಾಶಕರು : ವಿದ್ಯಾರಣ್ಯ ಪ್ರಕಾಶನ
68, ಸತ್ಯನಾರಾಯಣ ಲೇಔಟ್
3ನೇ ಸ್ಟೇಜ್, 4ನೇ ಬ್ಲಾಕ್, ಬಸವೇಶ್ವರ ನಗರ
ಬೆಂಗಳೂರು 560 079




ಬೀಚಿಯ ತಿಂಮ, ಕೇಫ ಅವರ ಶೌರಿ ಅವರಂತೆ ಅರುಣ ಅವರ ಸೃಷ್ಟಿ ಚೆಂಗ. ಈತ ಹುಂಬನಲ್ಲ, ಜಾಣನೆಂದು ಹೇಳುವಂತಿಲ್ಲ, ಕುತಂತ್ರಿ ಅನ್ನುವಂತಿಲ್ಲ, ಆದರೆ ಅವನ ಚಾಕಚಕ್ಯತೆಗೆ ಅವನೇ ಸಾಟಿ. ಈ ಸಂಕಲನದಲ್ಲಿರುವ 20 ಲೇಖನಗಳಲ್ಲಿ 12ರಲ್ಲಿ ಚೆಂಗನ ವಿವಿಧ ರೂಪಗಳನ್ನು ನಾವು ನೋಡಬಹುದು. ಇನ್ನುಳಿದ 8 ಲೇಖನಗಳು ಹಾಸ್ಯದ ವಿವಿಧ ಮಜಲುಗಳನ್ನು ನೀಡುತ್ತದೆ. ಹಾಸ್ಯ ಬರಹಗಾರರಿಗೆ ಇರಲೇಬೇಕಾದ, ಮುದ ಕೊಡುವ ನಿರೂಪಣೆ, ಅಲ್ಲಲ್ಲಿ ಚುಚ್ಚುಮದ್ದುಗಳಂತಹ ನುಡಿಗಳು, ವಕ್ರೋಕ್ತಿವಿಲಾಸ, ಹದವಾಗಿ ಹರಿಯುತ್ತಿದೆ ಎನ್ನುವಾಗ ಅನಿರೀಕ್ಷಿತವಾಗಿ ಧುಮ್ಮುಕ್ಕುವ ಹಾಸ್ಯ ಚಟಾಕಿ ಇವುಗಳೆಲ್ಲ ಸಂಕಲವನ್ನು ಓದಿಸಿಕೊಂಡು ಹೋಗುತ್ತದೆ. ಅರುಣ ಅವರಿಗೆ ಹಾಸ್ಯ ಬರವಣಿಗೆ ಸಿದ್ಧಿಸಿದೆ ಎನ್ನುವುದಕ್ಕೆ ಈ ಸಂಕಲನ ಒಂದು ಉದಾಹರಣೆ ಆದರೆ ಅವರ ಹಾಸ್ಯಪ್ರಜ್ಞೆಯನ್ನು ಗುರುತಿಸಿ ಅತ್ಯಮೂಲ್ಯವಾದ ಮುನ್ನುಡಿಯನ್ನು ಬರೆದುಕೊಟ್ಟಿರುವ ನಮ್ಮೆಲ್ಲರ ಹಾಸ್ಯಬ್ರಹ್ಮ ಪ್ರೊ. ಅ.ರಾ.ಮಿತ್ರ ಅವರ ಮಾತುಗಳು ಕಲಶಪ್ರಾಯವಾಗಿವೆ. ಅರುಣ ಅವರಿಗೆ ಎಲ್ಲ ಯಶಸ್ಸನ್ನೂ ಕೋರುತ್ತಾ ಅಪರಂಜಿ ಅವರಿಂದ ಇನ್ನೂ ಹತ್ತು ಹಲವಾರು ಹಾಸ್ಯ ಸಂಕಲನಗಳು ಹೊರಬರಲಿ ಎಂದು ಆಶಿಸುತ್ತಾಳೆ.

**– ಸುಕೇಶವ**

■

# ಆಸ್ಪತ್ರೆಯಲ್ಲಿ

**। ಓಂ ಪ್ರಕಾಶ್**

ಆಸ್ಪತ್ರೆಯ ವಾತಾವರಣ ಸಾಧಾರಣವಾಗಿ ಗಂಭೀರವಾಗಿರುವುದು ಸಹಜ. ಆದರೆ ಸದಾಕಾಲ ವೈದ್ಯರ ವೃತ್ತಿ ಮಾಡುವ ನಮಗೆ ಆಗಾಗ ಹಾಸ್ಯದ ಚಟಾಕಿಗಳು ಅಗತ್ಯ. ನಮ್ಮ ಮೆಡಿಸಿನ್ ವಿಭಾಗದಲ್ಲಿ ಬಹಳ ಜನಕ್ಕೆ ಹಾಸ್ಯಪ್ರಜ್ಞೆ ಇರೋದರಿಂದ ನೋವು, ತೊಂದರೆಗಳು ಅಷ್ಟು ಕಷ್ಟ ಅನ್ನಿಸುಲ್ಲ.

ಹೊರರೋಗಿಗಳ ವಿಭಾಗ. ಒಬ್ಬಳು ಮಹಿಳೆ ಹೊಸ ಕಾರ್ಡು ತಗೊಂಡು ಬಂದಿದ್ದಳು. ಯಥಾ ಪ್ರಕಾರ ಹಳೆಯ ಕಾರ್ಡು ಇರಲಿಲ್ಲ. ಯಾಕೆ ತರಲಿಲ್ಲ ಅಂದರೆ ಕಳೆದು ಹೋಯಿತು !

'ಆ ಕಾರ್ಡಿದ್ದರೆ ಹಿಸ್ಟರಿ ಟೆಸ್ಟುಗಳು ಮಾಹಿತಿ ಇರುತ್ತೆ. ಯೋಚನೆ ಮಾಡಮ್ಮ. ಯಾವುದಾದರು ಕಾಯಿಲೆ ಬಗ್ಗೆ ಮಾತಾಡುತ್ತಾ ಇದ್ದರೇ?' ಅಂತ ಕೇಳಿದೆ. ಆಕೆ ಸ್ವಲ್ಪ ಹೊತ್ತು ಚಿಂತಿಸಿ 'ಹಾ ನೆನಪಿಗೆ ಬಂತು' ಅಂತ --ಯುರೇಕಾ- ತರಹ,-- 'ಸಾರ್ ಕಾಯಿಲೆ ಗೊತ್ತಿಲ್ಲ. ಆದರೆ ಒಬ್ಬ ಡಾಕ್ಟರು ತೈರೊಡ್ಡೆ ಅಂತ ಹೇಳ್ತಾ ಇದ್ದರು!' ಸದ್ಯ, ಆಕೆಗೆ ಇದ್ದ ಥೈರಾಯಿಡ್ ಟೆಸ್ಟ್ ರಿಪೋರ್ಟ್‌ಗಳನ್ನ ಲ್ಯಾಬ್‌ನಿಂದ ತರಿಸಿದೆವು!

***

75 ವಯಸ್ಸಿನ ರೋಗಿ. ಹೆರ್ನಿಯಾ –ಕರುಳುಗಳು ಕಿಬ್ಬೊಟ್ಟೆಯಿಂದ ಹೊರಕ್ಕೆ ಬಂದಿರುವ ಕಾಯಿಲೆ –––. ಆಪರೇಷನ್ ಮಾಡಬೇಕು.

ಸರ್ಜನ್‌ಗಳು ಇದನ್ನ ಹೇಳುತ್ತಾರೆ – 'ಯಜಮಾನರೇ, ಹೀಗೆ ಬಿಟ್ಟರೆ ಎಮರ್ಜೆನ್ಸಿ ಆಗಿ ಪಜೀತಿ ಆಗಬಹುದು ಅಂತ ಸಲಹೆ ಕೊಡುತ್ತಾರೆ.

'ಡಾಕ್ಟರ್, ನನ್ನ ಮಗನ್ನ ಒಂದು ಮಾತು ಕೇಳಬೇಕು. ಸರ್ಜನ್ 'ಅವರೇನು ಸರ್ಜನ್ ಏನ್ರಿ? ಈ ಪ್ರಶ್ನೆಗೆ ರೋಗಿ ನಗುತ್ತ ಹೇಳಿದರು. "ಇಲ್ಲ ಸರ್ ಪಾಪ, ಅವನು ಇಂಜಿನಿಯರ್. ಆದರೆ ಆಪರೇಷನ್ ಚಾರ್ಜಸ್ ಅವನೇ ತಾನೇ ಕೊಡೋದು?

***

ಒಬ್ಬ 10 ವರ್ಷದ ಹುಡುಗ. ಅವನಿಗೆ ಶ್ವಾಸಕೋಶದಲ್ಲಿ ಒಂದು ದೊಡ್ಡ ಸಿಸ್ಟ್ – ದ್ರವ ತುಂಬಿದ ಗಡ್ಡೆ – ಇತ್ತು. ಆಪರೇಷನ್ ಮಾಡಲೇ ಬೇಕಾದ ಪರಿಸ್ಥಿತಿ. ಟೆಸ್ಟುಗಳೆಲ್ಲ ನಡೆದು ಆಪರೇಷನ್ ಸುಸೂತ್ರವಾಗಿ ನಡೆಯಿತು. ಸರ್ಜನ್ ಓ ಟಿ ಯಿಂದ ಬಂದು ತಾಯಿ ತಂದೆಯರಿಗೆ ನಿಮ್ ಹುಡುಗ ಬಲೇ ಧೈರ್ಯಶಾಲಿ. ಮರುದಿನ ಸರ್ಜನ್ ರೌಂಡ್ಸ್ ಬಂದಾಗ ಆ ಹುಡುಗ ಅಮ್ಮನಿಗೆ 'ಡಾಕ್ಟ್ರನ್ನ ಕೇಳಮ್ಮ, ಕೇಳಮ್ಮ' ಅಂತ ಹೇಳುತ್ತಿದ್ದ. ಆಕೆ ಏಯ್ ತಲೆಹರಟೆ, ಮಾಡಬೇಡ ಅಂದರು. ಸರ್ಜನ್ 'ಏನು ಮಗು, ನಿನ್ನ ಪ್ರಶ್ನೆ' ಅಂದರು. ಆಗ ಆ ತಾಯಿ 'ಡಾಕ್ಟರೇ ಇವನು ಸಂಸ್ಕೃತದಲ್ಲಿ ಬಹಳ ವೀಕು, ಟ್ಯೂಷನ್ ಮಾಸ್ಟರ್ ಇವನ ಎದೆ ಸೀಳಿದರೂ ಎರಡು ಅಕ್ಷರ ಇರುಲ್ಲ ಅಂತ ಬೈತಾರೆ!'

ಅವನು ಸಂಸ್ಕೃತದಲ್ಲಿ ಒಳ್ಳೆ ಮಾರ್ಕ್ಸ್ ತೆಗೆದ ಅಂತ ಫಾಲ್ಲೋ ಅಪ್ ವಿಸಿಟ್ಗೆ ಬಂದಾಗ ಗೊತ್ತಾಯಿತು.

***

ಹೀಗೆ – ವೈದ್ಯಕೀಯ ವಿಜ್ಞಾನದ ಎಲ್ಲ ವಿಭಾಗಗಳಲ್ಲಿ ಹಾಸ್ಯದ ದೃಷ್ಟಿಕೋನಗಳ ಉದಾಹರಣೆಗಳು ಇರುತ್ತವೆ. ಈಗ ಇಷ್ಟು ಸಾಕು, ಅಜೀರ್ಣ ಆಗಬಾರದಲ್ಲ!

# “ಬ್ಯೂಜಿನಾ.....?”

**। ಗುಂಡುರಾವ್ ದೇಸಾಯಿ**

ಪದ್ದುಗ....ಒಂದು ದಿನ ಕಾಲೊಂದು ಬಂತು.... ”ಏನು ಬ್ಯೂಜಿನಾ....” ಎನ್ನುವ ಧ್ವನಿ ಕೇಳಿ ಪುಳುಕಿತನಾದ....’ಓ...ಎಸ್ ..ಎಸ್...ಅದೆ ಧ್ವನಿ ಇಪ್ಪತ್ತು ವರ್ಷಗಳಾದವೇನೊ....? ಆ ಧ್ವನಿಗಾಗಿ ಎಷ್ಟೆಲ್ಲ ತಪಸ್ಸು ಮಾಡತಿದ್ವಿ...ಅದೆ....ನಾನು ಆ ಧ್ವನಿ ಬದುಕಿನಲ್ಲಿ ಕೇಳುತ್ತೇನೊ ಇಲ್ವಾ ಅನಕೊಂಡಿದ್ದೆ...ಅದು ನನ್ನದಾದರೆ ಸ್ವರ್ಗವೆ ಧರೆಗಿಳಿದಂತೆ ಭಾವಿಸಿದ್ದೆ...ಬಟ್...ನಿಜಾನಾ...’ ಎಂದು ಚಿವಟಿಕೊಂಡು ವಾಸ್ತವವೆಂದು ಖಾತ್ರಿಪಡಿಸಿಕೊಂಡ

“ಹಲೋ....ಯಾರಂತ ಗೊತ್ತಾಯ್ತಾ.....ಬ್ಯೂಜಿನಾ...ಹಾಗಿದ್ರೆ ಆಮೇಲೆ ಮಾಡ್ತಿನಿ” ಅಂದಿತು....ಎರಡು ದಶಕದ ನಂತರೂ ಅದೆ ಮಧುರ ಧ್ವನಿ....ನನ್ನ ಭಾಗ್ಯ ಇವತ್ತು.. ಆನ್ ಲೈನ್ ಮಿಟಿಂಗ ನಡಿತಿದ್ರು ಹೊರಬಂದು... “ನೀವು ...ಮೀನಾ ತಾನೆ.....?”

“ಹೊ...ಪದ್ದು ...ಗುರುತು ಹಿಡಿದ್ರಿ....ಸೊ..ನೈಸ್...”

“ಹೇಗೆ ಮರೆಯೋಕೆ ಆಗುತ್ತೆ ಮೇಡಂ....ನಿಮ್ಮೊಂದಿಗಿನ ಆತ್ಮೀಯ ಸ್ನೇಹವನ್ನು..ಹೌದು ನನ್ನ ನಂಬರ್ ಹೇಗೆ ಸಿಕ್ಕಿತು?”...ಎಂದ

“ಹೋ.... ನಾಟಿ... ಮೇಡಂ ಅಂತಿರಾ ಪದ್ದು..ಬಿಟ್ಟಾಕಿ ಕಾಲ ಮಿ ಯಾಜ ಎ ಮೀನಾ ಓನ್ಲಿ.. ಹೇಗೋ ಸಿಕ್ಕಿತಪಾ...ಹೇಳಿ ಎಲ್ಲಿ ಇರೋದು.?.ಏನು..ಕೆಲಸ? ಮನೆ ಮಕ್ಕಳು...” ಆ ಬಗ್ಗೆ ಎಲ್ಲಾ ಚರ್ಚೆ ನಡಿತು.... “ಹೋ..ಸೋ ಲಕ್ಕಿ ಮೇಡಂ..ನೀವು...ಬಾಂಬೆದಲ್ಲಿ ಸ್ವಂತ ಮನೆ...ಸಾಫ್ಟವೇರ್ ಪತಿ...ಬೈದಿ ಬೈ ನಾನು ಬೆಂಗಳೂರಲ್ಲಿ ಇರೋದು..ಬಂದಾಗ ಬನ್ನಿ”ಎಂದ

“ಯಾರ್ರಿ ಅದು ಯಾರ ಜೊತೆ ಮಾತಾಡತಾ ಇರೋದು...” ಪಮ್ಮಿಯ ಧ್ವನಿ ಬಂತು ಒಳಗಿನಿಂದ

“ಅದೆ ನನ್ನ ಕ್ಲಾಸ ಮೇಟ್ ಮೀನಾ ಅಂತ ಹೇಳತಿದ್ದೆನಲ್ಲ.... ಅವರು ಮಾಡಿದ್ದು...”

“ಓ ಮನೆಯವರು ಇದ್ದಾರ ಕೊಡಿ ಮಾತಾಡುವೆ” ಎಂದಳು ಮೀನಾ.

ಭಯದಿಂದ ಕೊಟ್ಟ ಪದ್ದು... “ಹೇಳಿ ಮೇಡಂ ಹೇಗಿದ್ದಿರಿ...ನಾನು ನಿಮ್ಮ ಮನೆಯವರ ಕಾಲೇಜ್ ಮೇಟ್..ಯು ಆರ್ ಲಕ್ಕಿ....ಒಳ್ಳೆ ಪರಸನ್...ನಿಮಗೆ ಸಿಕ್ಕಿದ್ದು” ಎಂದು ಏನೆಲ್ಲಾ ಹೇಳತಿದ್ರೆ ಈಕೆಯ ಮುಖದಲ್ಲಿ ಬೇರೆ ಆಗತಿತ್ತು..ಈಕಿನೂ ಕೂಲಾಗಿ ಮಾತನಾಡಿ... “ಬೆಂಗಳೂರಿಗೆ ಬಂದಾಗ ಬನ್ನಿ” ಎಂದಳು. “ನಿಮ್ಮ ಮಾತು ಕೇಳತಾ ಇದ್ರೆ ನೀವು ಬಹಳ ಒಳ್ಳೆಯವರಾಗಿ ಕಾಣ್ತಿರಿ..ಖಂಡಿತ ಬರತೀನಿ” ಎಂದು ಫೋನ ಕಟ್ ಮಾಡಿದಳು

“ಬರತಾಳಂತೆ ಬರತಾಳೆ.....ಬಿನ್ನಾಣಗಿತ್ತಿ..ಇಪ್ಪತ್ತೈದು ವರ್ಷ ಆದ ಮೇಲೆ ಯಾಕ ನೆನಪಾಯ್ತೋ ಈ ಮೂದೇವಿಗೆ...ನನ್ನ ಗಂಡನ ಬೇಕಾಗಿತ್ತಾ?”ಅಂತ ಕೈ ಕೈ ಹಿಚುಕೊಳ್ಳಾಕತಿದ್ಲು....ಸಮಯ ಸಿಕ್ಕಾಗ ಪದ್ದು ಅವಳ ಬಗ್ಗೆ ಬಹಳ ವರ್ಣನೆ ಮಾಡ್ತಿದ್ದ..ಅವಳು ಕಣ್ಣು ಹಾಗೆ..ಜಡೆ..ಹೀಗೆ...ತುಟಿ ಹಾಗೆ...ನಡೆ ಹೀಗೆ...ಅಂತ...ಹೇಗೆ ಆಗಲಿಕ್ಕಿಲ್ಲ! ಅವಳದೆ ಫೋನ್ ಬಂದಾಗ..ಸವತಿ ಮತ್ಸರ ಸಹಜವಾಗಿ ಕೆರಳಿತು.....ಮುಖ ಕೆಂಪಾಯಿತು...

“ಯಾಕೆ..?ಹಾಂಗ ದೀಢೀರ್ ನ ಚೇಂಜ್ ಆದಿ!”

“ಆಗದೆ ಏನೋ..ಸಿಕ್ಕಳಲ್ಲ ಆ ಮೂದೇವಿ..ಮುಗಿತು ನನ್ನ ಕಥೆ”

“ಅಂಯ್ಯೋ...ನನ್ನ ಕಥೇನ ಎಲ್ಲಾ ಮುಗುದಾಗಿದೆ.....ಮತ್ತೆಲ್ಲೆ ಶುರುವಾಗೋದು...ನಾನು ಆಕೆ ಬಗ್ಗೆ ಹೇಳತಿದ್ದ ಎಲ್ಲಾ ಮಾತುಗಳು ಸುಳ್ಳು...ಸುಮ್ಮನೆ ನಿನ್ನ ರೇಗಸೋಕೆ ಹಾಗೆ ಮಾಡತಿದ್ದೆ...ಆಕೆ ಕಾಲೇಜಿನ್ಯಾಗ ನಮ್ಮ ಕಡೆ ತಿರುಗಿ ಸಹಿತ ನೋಡತಿರಲಿಲ್ಲ...”

“ಇಷ್ಟ್ಯಾಕ ಹೌಹಾರಿರಿ... ಹೌದು ತಿರುಗಿ ನೋಡಲಾರದ ಮೂದೇವಿ ಈಗ್ಯಾಕ ಫೋನ್ ಮಾಡಿದಳು”

“ನನಗೂ ಗೊತ್ತಿಲ್ಲ...ವಿಚಾರಸ್ತಿನಿ...ಮೋಸ್ಟಲಿ ಕಾಲೇಜ್ ಗ್ರುಪ ನಲ್ಲಿ ನಂಬರ್ ಸಿಕ್ಕಿರಬೇಕು, ಮಾಡಿರಬೇಕು..”

“ಆಕಿ ಫೋನ್ ನಂಬರ್ ಕೊಡಿ ನಾನೇ ವಿಚಾರಸ್ತಿನಿ”

“ಬೇಡಾನೆ ಏನಾದರೂ ಅಂದಿದಿ..ಈಗ ತಾನೆ ಕಾಲ್ ಮಾಡಿದ್ದಾಳೆಸಂಬಂದ ಮುರಿಬೇಡೆ”

“ಹಾಂ..!.ಎಷ್ಟು ನುಲಿಯಾಕತಿರಿ..ಇಪ್ಪತ್ತೈದು ವರ್ಷದಿಂದ ಅವಳ ಇದ್ದಳಾ?”

“ಆಯ್ತು ತಾಯಿ...ನಿನ್ನ ಸಂಗಡ ವಾದ ಮಾಡೋಕಾಗುತ್ತಾ..ಮಾತಾಡತಿಯಲ್ಲ ಮೆಲ್ಲಕ ಮಾತಾಡು.”

“ಆಯ್ತು ಮೊದಲು ಜಾಗ ಖಾಲಿ ಮಾಡಿ” ಎಂದ್ಲು

“ನನ್ಮುಂದನ ಮಾಡೆ...”

“ ಹ್ಞುಂ ......”ಅಂತ ಗುರಾಯಿಸಿದಳು

“ಆಯ್ತು ಮಹರಾಯ್ತಿ ಏನರ ಮಾಡಿಕೊ” ಎಂದು ಕಾಲ್ಕಿತ್ತಿದ

ಹಿಂಗ್ ಕಾಲ್ ಬಂದದ್ದು ವ್ಯಾಟ್ಸಪ್ ಮೂಲಕ ಚಾಟ್ ಮಾಡವುದರಲ್ಲಿ ಮುಂದುವರೆತು..

ಸ್ನೇಹ ಬೆಳಿತು..ಪದ್ದುನ ಕಲ್ಪನೆಯ ಮೀನಾ ಕಾಲೇಜಿನದ್ದೆ..ಮುದ್ದು ಮುಖ..ಉದ್ದ ಜಡೆ...ಆಕರ್ಷಿಸುವ ಕಂಗಳು...ಅವಳ ಒಂದು ಕರೆಯಿಂದ ಥ್ರಿಲ್ ಆದ ಪದ್ದು ಕಾಲೇಜನಲ್ಲಿ ಕೊನೆಯಾಗಿದ್ದ ಕಾವ್ಯತ್ವವನ್ನು ಹೊರತೆಗೆದ..ನಿತ್ಯ ಒಂದು ಹೊಸ ಕವಿತೆ ಮೀನಾಳಿಗಾಗಿ ಬರೆಯತೊಡಗಿದ... “ವಾಟ್ ಎ ಬ್ಯೂಟಿಫುಲ್ ರೈಟಿಂಗ್...ಐ ಲೈಕೈ ಇಟ್.. ಲವ್ ಇಟ್..” ಅಂತ ಮೆಸ್ಸೇಜ್ ಬಂದಿದ್ದೆ ತಡ...ಬರವಣಿಗೆ ಓತಪ್ರೇತವಾಯಿತು..

ಆತ್ಮೀಯತೆ ಹೆಚ್ಚುತ್ತಾ ಹೋಯಿತು ಚಾಟಿಂಗ್ ಎಲ್ಲೆ ಮೀರದಂತೆ ನಡೆದಿತ್ತು..ಕೆಲಸದ ಮೇಲೆ ಪದ್ದು ದೆಹಲಿಗೆ ಹೋಗಿದ್ದಾಗ ಬೆಂಗಳೂರಿಗೆ ಬಂದಿದ್ದಳು...ಮನೆಗೂ ಬಂದು ಹೋಗಿದ್ದಳು...ಪದ್ದು ತಡವರಿಸಿದ್ದು ಅಷ್ಟಿಷ್ಟಲ್ಲ. “ಏನ್ರಿ ನಾನು ಇಲ್ಲದಾಗ  ಬಂದುಬಿಟ್ರಿ.....” ಎಂದು ಜಗಳಾನೂ ತೆಗೆದು ಮಾತು ಬಿಟ್ಟಿದ್ದ.. “ಇನ್ನೊಮ್ಮೆ ನಾನು ಇರುವಾಗ ಬರಬೇಕು” ಎನ್ನುವ ಒತ್ತಾಯಕ್ಕೆ ಮತ್ತೆ ಗೆಳೆತನ ಮುಂದುವರೆದಿತ್ತು

ಫೋನ್ ಬೆಸೆದ ಹಳೆಯ ಬಾಂಧವ್ಯ ಒಂದು ಹೊಸ ಕನಸ್ಸನ್ನೆ ಸೃಷ್ಟಿಸಿತ್ತು. ಪರಸ್ಪರ ಭೇಟಿಯಾಗುವ ದಿನ ಬಂದೆಬಿಟ್ಟಿತು..ಬೆಂಗಳೂರಿಗೆ ಮದುವೆಗಾಗಿ ಬರುತ್ತಿದ್ದೇನೆ ಎನ್ನುವ ಮೆಸ್ಸೆಜ್ ಬಂದಿದ್ದೆ ತಡ..ಖುಷಿಯಿಂದ “ಪಮ್ಮಿ ನಾಳೆ ಮೀನಾ ಬರತಾಳಂತೆ

" ಎಂದು ಓಡೋಡಿ ಬಂದು ಹೇಳಿದ

"ಹೌದು ನನಗೆ ಗೊತ್ತು"

"ಹಾಂ! ಹೇಗೆ...?"

"ಕಾಲ್ ಮಾಡಿ ಹೇಳಿದ್ದಾಳೆ"

"ನಿನಗೆ ಏನು ಅನಿಸಲಿಲ್ವಾ?"

"ಏನು ಅನಿಸಬೇಕು...ಒಳ್ಳೆಯವರಿದ್ದಾರೆ,,,ಯು ನೋ ವಿ ಆರ್ ಗುಡ್ ಫ್ರೇಂಡ್ಸ..ಲಾಸ್ಟ್ ಟೈಮ್ ಬೆಂಗಳೂರಿಗೆ ಬಂದಾಗ ಸಕತ್ ಕಂಪನಿಕೊಟ್ರು"

"ಯು....ಲಕ್ಕಿ...ನಾನು ಇರಲಿಲ್ಲ ಅಲ್ಲ..ನಾಳೆ ಬರತಾರಂತೆ..!"

"ಬರಲಿ..ಏನೇನು ಮಾಡಬೇಕು ಹೇಳಿ ಮಾಡುವೆ...."

"ಮಾಡುವಿಯಂತೆ...ಒಂದು ಕೇಳಲಾ...ನಾನು ಹೇರ್‌ಡ್ರೈ ಮಾಡಿಕೊತೀನಿ...ಫೇಸ್ ವಾಶ ಮಾಡಿಸಿಕೊಂಡು ಬರತೀನಿ...."

"ಅಯ್ಯೋ ಅಷ್ಟ್ಯಾಕೆ ಕೇಳತಿರಿ..ನಾನೇ ಹೇರ್ ಡ್ರೈ ಮಾಡ್ತೀನಿ" ಅಂತ ಮಾಡಿದಳು......".ಬೇಕಾದ್ರೆ ಪಾರ್ಲರ್ ಗೆ ಹೋಗಿ ಬನ್ನಿ" ಎಂದು ಕಳಿಸಿಕೊಟ್ಟಳು

ಪದ್ದು ಕಕ್ಕಾಬಿಕ್ಕಿ...ಒಂದು ಕೂದಲು ಸಿಕ್ರೆ ವಾರಗಟ್ಟಲೆ ವಿಚಾರಣೆಗೆ ಒಳಪಡಿಸುತ್ತಿದ್ದವಳು...ಇವಳಾ? "ಮೀನಾ ನೀನು ಗ್ರೇಟ್ ಒಂದೆ ಭೇಟಿಯಲ್ಲಿ ಏನೆಲ್ಲಾ ಬದಲಾವಣೆ ಮಾಡಿಯೇ?" ಎಂದು ಕರೆ ಮಾಡಿ ಹೇಳಿದ್ದ. "ಇಲ್ಲಾ ಪದ್ದು..ನಿಮ್ಮ ಮಿಸೆಸ್ ಸಿಂಪಲಿ ಗ್ರೇಟ್" ಅಂದಿದ್ದಳು

"ಹೋ..ಹೋ..ಇಬ್ಬರ ನಡುವೆ ಹೊಂದಾಣಿಕೆ ನಮಗೆ ಅನಕೂಲ" ಎಂದು ಮುಸಿ ಮುಸಿ ನಕ್ಕಿದ್ದ

ಸೆಲೂನ್ ಹೋಗಿ ಬಂದ ಪದ್ದುರಾಯರನ್ನು ಪಮ್ಮಿ ಗುರುತಿಸಲಾರಲಾದಳು.. "ಮದುವೆಗೂ ಅಷ್ಟು ತಯ್ಯಾರಾಗಿರಲಿಲ್ಲ...ಇಂದು ಹಳೆಯ ಸ್ನೇಹಿತೆ ಬರತಾಳೆ ಅಂದ್ರೆ ಎಷ್ಟು ಚಂದ ಸಿದ್ದರಾಗಿರಿ" ಎಂದು ಮೂಗು ಮುರಿದಳು... "ಸೆಲ್ಯೂನ್ ಹುಡುಗ ಮಾಡಿದ್ದು, ನಾನು ಶೇವಿಂಗ್ ಅಷ್ಟೆ ಮಾಡಂತ ಹೇಳಿದ್ದೆ" ಎಂದು ಡೈವರ್ಟ ಮಾಡಿಮೆಲ್ಲನೆ ಕನ್ನಡಿ ನೋಡಿಕೊಂಡು....ತನ್ನನ್ನೆ ತಾನು ನಂಬದಾದ...ಇಪ್ಪತ್ತು ವರ್ಷ ಹಿಂದೆ ಹೋದ ಮೇಕಪ್ಪ ಆಗಿತ್ತು..ಒಳೊಳಗೆ ಖುಷಿ ಪಟ್ಟ..

ಮಧ್ಯಾಹ್ನ ಊಟಕ್ಕೆ ಬರತಿನಂದಿದ್ರು. ಅಂದು ಯಾಕೊ ಸಮಯ ಓಡಲಿಲ್ಲ...ಒಂದು ತಾಸು ವರ್ಷವಾದಂತೆ ಭಾಸವಾಗತೊಡಗಿತು.. ಟೈಮು ಓಡ್ತಾ ಇಲ್ಲ ಇಲ್ಲ ಎಂದು ತಡವರಿಸಿದ.ಬೋನಿನಲ್ಲಿ ಹಾಕಿದ ಹುಲಿಯಂತೆ ಅತ್ತ ಇತ್ತ ಓಡಾಡತೊಡಗಿದೆ.

"ಯಾಕ ಅಷ್ಟು ಅವಸರ ಮಾಡ್ತೀರಿ ತಡಿ..ಬರತಾರೆ...ನನಗಾಗಿ ಇಷ್ಟು ತಡವರಿಸಿದ್ದೀರಾ?" ಎಂದು ಕೊಂಕು ನುಡಿದಳು

ಪದ್ದುಗ ನಿಜ ಅನಿಸ್ತು...ಹೌದಲ್ಲ ಎಂದು ಫ್ಲಾಶ ಬ್ಯಾಕಿಗೆ ಹೋದಾಗಲೇ ಕಾರ್ ಸಪ್ಪಳ ಆಯ್ತು... "ಬಂದ್ರು ನೋಡ್ರೀ" ಎಂದು ಪಮ್ಮಿ ಕರೆದಳು... "ನಾನು ಒಳಗಿರತೀನಿ ನೀನು ಕರಕೊಂಡು ಬಾ" ಎಂದು ಒಳಹೋದ...

ಒಳಗೆ ಬಂದದ್ದಾಯಿತು...ಆ ಧ್ವನಿ ಕೇಳತಾ ಪುಳಕಿತನಾಗುತ್ತಿದ್ದ.. "ಎಲ್ಲಿ ನಿಮ್ಮನೆಯವರು ಕಾಣ್ತಾನೆ ಇಲ್ಲ ಎಂದು ಧ್ವನಿ ಬಂದಿದ್ದೆ ತಡ....ಪದ್ದು ಹಾಲನಲ್ಲಿ ಕಾಲಿಟ್ಟ......ರೋಮಾಂಚನದಿಂದ..."ಹೋ ಪದ್ದು ಹೌ ಆರ್ ಯು?"ಎಂದು ಧ್ವನಿ

ಬಂದ ಮೀನಾಳತ್ತ ದೃಷ್ಟಿ ಬೀರಿದ

"ಫೈನ್.....!" ಅಂತ ಹಾಗೆ ನಿಂತ

"ಏನ್ರಿ ಹೇಗಿದ್ದವರು ಹಾಗೆ ಇದ್ದೀರಿ....ಅದೆ ಡೈನಾಮಿಕ್ ಪರ್ಸನಾಲಟಿ" ಎಂದು ಕೈಕುಲುಕಿ ವಿಶ್ ಮಾಡಿದಳು

".......”ಪದ್ದುಗ ಮಾತು ಹೊರಡಲಿಲ್ಲ.

ಪದ್ದು "ಯಾಕ್ರಿ ಹಾಗೆ ನಿಂತ್ರಿ?" ಎಂದ್ಲು ಮೀನಾ

"ಬಹಳ ದಿನದ ಮೇಲೆ ನೋಡಿದ್ದಾರಲ್ಲ...ಮಾತು ಬರುತ್ತಿಲ್ಲ ರಾಯರಿಗೆ..ಹೌದಲ್ರಿ?" ಎಂದು ಪಮ್ಮಿ ತೀವಿದಳು

"ಎಸ್ ಪದ್ದು...ನಾವು ನೋಡಿ ಹೇಗಾಗಿ ಬಿಟ್ವಿವಿ...ನಿಮ್ಮನ್ನ ನೋಡಿದ್ರೆ ಸಂಕಟ ಆಗುತ್ತಪ"

ಪದ್ದುಗ ಸಂಕಟ ಪಡೋ ಸಮಯ ಅದಾಗಿತ್ತು..ತನ್ನ ಕಲ್ಪನೆಯ ಮೀನಾ ಆಗಿರಲಿಲ್ಲ...ಉದ್ದಕೂದಲು ಹೋಗಿ ಚೊಟಾಗಿತ್ತು...ಕಂಗಳು ಬತ್ತಿದ ಬಾವಿಯಂತಾಗಿದ್ದವು..ತುಂಬಿದ ಗಲ್ಲ ಒಳ ಸೇರಿದ್ದವು..ಹಲ್ಲು ಬಿದ್ದ ಅರ್ಧ ಬೊಚ್ಚಾಗಿತ್ತು.. ತುಂಬಿಕೊಂಡ ಶರೀರ ಬಡಕಲಾಗಿತ್ತು....ಪದ್ದನು ಕಾಣಲು ಮಾಡಿಕೊಂಡ ಬಂದ ಮೇಕಪ್ ಹೆಣಕ್ಕೆ ಶೃಂಗಾರ ಮಾಡಿದಾಂಗೆ ಆಗಿತ್ತು.

"ಮಾತಾಡಿ ಪದ್ದು ಪೋನ್ ನಲ್ಲಿ ಏನೆಲ್ಲ ಮಾತಾಡತಿದ್ರಿ...? ಎಂದು ಮೀನಾ ಒತ್ತಾಯಿಸಿದಳು

ಪಮ್ಮಿ ಮುಸಿ ಮುಸಿ ನಗುತಿದ್ದಳು

ಇವರೆಲ್ಲಿ ಮಾತಾಡತಾರಿ. ಮೊದಲಿಂದಲೂ ಹಾಗೆ ಮೌನಿ ಬಾಬಾ ಎಂದು ನಾನು ಊಟಕ್ಕ ಅರೆಂಜ್ ಮಾಡ್ತೀನಿ ಅಂತ ಒಳಹೋದಳು..

ಮೀನಾ ಖುಷಿ ಖುಷಿಯಿಂದ ಮಾತಾಡತಿದ್ರು....ಪದ್ದುನು ಮಾತಾಡಿದ...ಆದರೆ, ಕನಸಿನ ಕಟ್ಟೆ ಒಡೆದು ಹೋಗಿತ್ತು...ಆದರೂ ಮಾತಾಡಿದ ಹಳೆಯ ನೆನಪುಗಳನ್ನು ಹಂಚಿಕೊಂಡ...ಕಾಲೇಜಿನಲ್ಲಿ ಸೊಕ್ಕಿನಿಂದ ಮೆರೆದ ಮೀನಾ ಈಕಿನಾ ಅಂತ ಕನಿಕರನೂಗೊಂಡ..

ಹೋಗುವ ಸಮಯ ಬಂತು...ಮೀನಾ ಖುಷಿಯಿಂದ ಟಾಟಾ ಮಾಡಿದಳು...ಪಮ್ಮಿಯ ಪದ್ದುನ ಕೈ ಹಿಡಿದು ಟಾಟಾ ಮಾಡಿಸಿದಳು..

ಪಮ್ಮಿಯ ಗೆಲುವಿನ ಗುಟ್ಟಾ ರಟ್ಟಾಗಿತ್ತು.....ಅಂದಿನಿಂದ ಪಮ್ಮಿಗೆ ಮೀನಾ ಪದ್ದುನ ರೇಗಿಸುವ ವಸ್ತುವಾದಳು.. ■

## ಹುಡುಕುತ್ತಲೇ ಇದೆ

**ಮೂವರು ಹಡಗಿನಲ್ಲಿ ಪಯಣಿಸುತ್ತಿದ್ದರು. ಆಗ ದೆವ್ವವೊಂದು ಅವರನ್ನು ಅಡ್ಡಗಟ್ಟಿ ಸವಾಲೊಂದನ್ನು ಅವರ ಮುಂದೆ ಇಟ್ಟಿತು. 'ಸಮುದ್ರಕ್ಕೆ ಮೂವರೂ ಏನಾದರೂ ಬೇರೆ ಬೇರೆ ಎಸೆಯಿರಿ. ಯಾರಾದರೂ ಎಸೆದಿದ್ದನ್ನು ತಂದು ಕೊಡಲಾಗದೆ ಇದ್ದರೆ ಅವನ ಗುಲಾಮನಾಗಿರುವೆ. ತಂದು ಕೊಟ್ಟರೆ ಅದನ್ನು ಎಸೆದವನನ್ನು ತಿನ್ನುತ್ತೇನೆ' ಎಂದಿತು. ಒಬ್ಬ ವಜ್ರ ತುಂಡನ್ನು ಎಸೆದ. ದೆವ್ವ ಅದನ್ನು ಹುಡುಕಿ ಅವನನ್ನು ತಿಂದಿತು. ಇನ್ನೊಬ್ಬ ತಾನು ಕಟ್ಟಿದ್ದ ಬೆಲೆ ಬಾಳುವ ಗಡಿಯಾರ ಎಸೆದ. ಅವನನ್ನೂ ದೆವ್ವ ತಿಂದಿತು. ಮೂರನೆಯವನು 'ನಾನೇನು ಮೂರ್ಖನಲ್ಲ..' ಎನ್ನುತ್ತಾ ಒಂದು ಬಾಟಲಿಗೆ ನೀರು ತುಂಬಿ ಅದನ್ನು ಸಮುದ್ರಕ್ಕೆ ಸುರಿದು 'ಹೋಗು ಅದನ್ನು ಹುಡಿಕಿ ತಾ..' ಎಂದ. ದೆವ್ವ ಅದನ್ನು ಇನ್ನೂ ಹುಡುಕುತ್ತಲೇ ಇದೆ.**

## STATEMENT OF OWNERSHIP OF APARANJI
## (KANNADA MONTHLY)
## (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Bharath |
| | Nationality | : | Indian |
| | Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2021 **M. ShivaKumar**
Bangalore (Signature of the Publisher)